(ಸದನವು 2.00 ಗಂಟೆಗೆ ಮುಕ್ತಾಯವಾಗಿ ಮತ್ತೆ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ್ ಸಿ. ಮಾಮನಿ) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).

8 ಪ್ರಕಟಣೆ

ಉಪಾಧ್ಯಕ್ಷರು : ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಕ 118ರ ಮೇರೆಗ ದಿನಾಂಕ : 14ನೇ ಆಗಸ್ಟ್ 1996 ರಂದು ಕರ್ನಾಟಕ ವಿಧಾನಪರಿಷತ್ತು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿಗಳಿಲ್ಲದೆ ಸಮ್ಮತಿ ನೀಡಿದೆ ಎಂದು ಈ ಮೂಲಕ ತಿಳಿಸುತ್ತೇನೆ.

1) ಕರ್ನಾಟಕ ಧನವಿನಿಯೋಗ (2) ವಿಧೇಯಕ 1996.

2) ಕರ್ನಾಟಕ ಧನವಿನಿಯೋಗ (3) ವಿಧೇಯಕ, 1996.

3) ಕರ್ನಾಟಕ ತೆರಿಗೆ ಕಾನೂನುಗಳ (ಮೂರನೇ ತಿದ್ದುಪಡಿ) ವಿಧೇಯಕ, 1996.

9 ವರದಿಗಳನ್ನೊಪ್ಪಿಸುವುದು

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷರು) : ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷನಾದ ನಾನು, ಸಮಿತಿಯ ಪ್ರಥಮ ಮತ್ತು ದ್ವಿತೀಯ ವರದಿಗಳನ್ನು ಸಭೆಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

10 ಶಾಸನಾ ರಚನಾ ಕಾರ್ಯಕಲಾಪಗಳು

ಕರ್ನಾಟಕ ಪಂಚಾಯತ್ ರಾಜ್ (2ನೇ ತಿದ್ದುಪಡಿ) ವಿಧೇಯಕ 1996ರ ಮೇಲಿನ ಮುಂದುವರಿದ ಚರ್ಚೆ.

ಉಪಾಧ್ಯಕ್ಷರು : ಕಾಗೋಡು ತಿಮ್ಮಪ್ಪನವರೆ ತಾವು ಮಾತನಾಡಿ.

(ಈ ಸಂದರ್ಭದಲ್ಲಿ ಸಭಾಧ್ಯಕ್ಷರ ಪೀಠವನ್ನು ಶ್ರೀಮತಿ. ಪ್ರಮೀಳಾ ನೇಸರ್ಗಿಯವರು ಅಲಂಕರಿಸಿದರು)

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಸಚಿವರು ತಂದಿರುವ ಈ ಮಸೂದೆ ಸಣ್ಣದಾದರೂ ಕೂಡ ಪರಿಣಾಮದಲ್ಲಿ ಬಹಳ

ದುಷ್ಪರಿಣಾಮವನ್ನು ಮಾಡುತ್ತದೆ ಎನ್ನುವ ಮಾತನ್ನು ನಾನು ಅವರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಪ್ರಕಾಶ್‌ರವರೇ, ನೀವು ಅಮೇಲೆ ಮಾತನಾಡಿ, ವಿಧೇಯಕದ ಮೇಲೆ ಚರ್ಚೆ ಮಾಡುವಾಗ, you must be very serious and you should listen tie members. ಏಕೆಂದರೆ ಇದರಲ್ಲಿ ತಂದಿರುವ ನಾಲ್ಕು ತಿದ್ದುಪಡಿಗಳು ಅಷ್ಟರಮಟ್ಟಿಗೆ ನಮ್ಮ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಭೂಗತ ಮಾಡುವ ಸನ್ನಿವೇಶಕ್ಕೆ ಬಂದಿವೆ. ಅದರಲ್ಲೂ ಪ್ರಕಾಶ್‌ರಂತಹವರೂ ಇದರ ಬಗ್ಗೆ ಸ್ವಲ್ಪ ವಿಶೇಷವಾಗಿ ಗಮನಹರಿಸಬೇಕು. ಯಾವುದೋ ಒಂದೆರಡು ಸಂದಿಗ್ಧ ಸಂದರ್ಭಗಳು ಬರುತ್ತವೆ ಎನ್ನುವ ಕಾರಣದಿಂದಲೇ ನಾವು ಅದಕ್ಕೊಂದು ತಿದ್ದುಪಡಿಯನ್ನು ತಂದು ತಾತ್ಕಾಲಿಕ ಪರಿಹಾರವನ್ನು ಕಂಡುಹಿಡಿಯುವುದಕ್ಕಿಂತ ಹೆಚ್ಚಾಗಿ, ಒಂದು ವ್ಯವಸ್ಥೆಯ ಮೇಲಾಗತಕ್ಕಂಥ ಪರಿಣಾಮವನ್ನು ಗಮನದಲ್ಲಿಟ್ಟುಕೊಂಡು ನಾವು ಶಾಶ್ವತ ಪರಿಹಾರಕ್ಕೆ ಪ್ರಯತ್ನಪಡಬೇಕೇ ವಿನಹ ನಮ್ಮ ಅನೇಕ ರಾಜಕೀಯ ಚದುರಾಟಕ್ಕೆ, ಹೊಂದಾಣಿಕೆಗೆ ಇದೊಂದು ವಸ್ತುವಾಗಿ ದಯವಿಟ್ಟು ಬಳಸಿಕೊಳ್ಳಬಾರದು. ಈವಾಗ ಈ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ ಕೋರಂ ಆಗದೇ ಹೋದರೆ ಮುಂದೂಡಿದ ಸಭೆಯಲ್ಲಿ ಕೋರಂನ ಅಗತ್ಯವಿಲ್ಲ ಎನ್ನುವ ಒಂದು ತಿದ್ದುಪಡಿಯನ್ನು ತಾವು ತಂದಿದ್ದೀರಿ. ಇದಕ್ಕೆ ನಾನೊಂದು ಸಲಹೆಯನ್ನು ನೀಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ತಾವು ಈಗ ಅಧ್ಯಕ್ಷರ ಪೀಠದಲ್ಲಿದ್ದೀರಿ, ಇಲ್ಲಿ ಮಾತನಾಡಿದ್ದೀರಿ, ಶ್ರೀಮಾನ್ ಖರ್ಗೆಯವರು ಕೂಡ ಮಾತನಾಡಿದ್ದಾರೆ. ಕಡ್ಡಾಯವಾಗಿ ಚುನಾಯಿತ ಪ್ರತಿನಿಧಿಗಳು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ ಬಂದಾಗ ಮತವನ್ನು ಹಾಕಲೇ ಬೇಕು ಇಲ್ಲದಿದ್ದರೆ ಅವರ ಸ್ಥಾನವನ್ನು ಅನೂರ್ಜಿತಗೊಳಿಸಬೇಕೆನ್ನುವ ಅಭಿಪ್ರಾಯವನ್ನು ತಾವೇನೋ ಹೇಳಿದ್ದೀರಿ. ಆದರೆ ನಾನು ಅದಕ್ಕೆ ಪ್ರಬಲವಾದ ವಿರೋಧವನ್ನು ಹೇಳಬೇಕಾಗುತ್ತದೆ. ಕಾರಣವೇನೆಂದರೆ, ಇದು ನನ್ನ ಮೂಲಭೂತವಾದಂಥ ಹಕ್ಕು. ಯಾರಿಗೆ ಮತ ಹಾಕಬೇಕು, ಯಾರಿಗೆ ಮತ ಹಾಕಬಾರದು, ನಾನು ಮತ ಹಾಕುವುದಕ್ಕೆ ಹೋಗಬೇಕೇ ಹೋಗಬಾರದೇ ಎನ್ನುವುದು ನನ್ನ ಮೂಲಭೂತವಾದಂಥ ಹಕ್ಕು, ಅದನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಪಡಬಾರದು. ತಮಗೆ ನೆನಪಿರಬಹುದು, ಹಿಂದೊಮ್ಮೆ ಮಧುಲಿಮೆಯವರು ಲೋಕಸಭೆಯಲ್ಲಿ ಚರ್ಚೆ ಮಾಡಿದ್ದರು. ನಮ್ಮ ಆಂಟಿ ಡಿಫೆಕ್ಷನ್‌ಬಿಲ್ ಕೂಡ ನಮ್ಮ ಮೂಲಭೂತ ಹಕ್ಕಿಗೆ, ಸ್ವಾತಂತ್ರ್ಯಕ್ಕೆ ಧಕ್ಕೆ ತರತಕ್ಕಂಥ ಮಸೂದೆ, ಇದನ್ನು ತರಬಾರದು ಎನ್ನುವ ಪ್ರಬಲವಾದ ವಿರೋಧವನ್ನು ಆ ಕಾಲದಲ್ಲೂ ಕೂಡ ಅವರು ಮಾಡಿದರು. ದಿವಂಗತ ಪ್ರಧಾನಮಂತ್ರಿ ಮುರಾರ್ಜಿದೇಸಾಯಿಯವರು ಪ್ರಧಾನಮಂತ್ರಿಗಳಾಗಿದ್ದಂಥ ಕಾಲದಲ್ಲಿ ಅದಕ್ಕೆ ಆ ತಿದ್ದುಪಡಿಯನ್ನು ತರುವ ಪ್ರಯತ್ನವನ್ನು ಮಾಡಿದಾಗಲೂ ಕೂಡ ಅದನ್ನು ಅವರು ತಡೆಹಿಡಿದಿದ್ದರು.

ವಿಶೇಷವಾಗಿ ಮಧುಲಿಮೆಯವರೇ ಅದಕ್ಕೆ ಮುಖ್ಯವಾದಂಥ ಕಾರಣ. ಆದ್ದರಿಂದ ಹಂತಹಂತವಾಗಿ ಚುನಾಯಿತ ಪ್ರತಿನಿಧಿಗಳಿಗೆ ಬಂತು ಮತ್ತು ನಾಗರೀಕನಿಗೆ ಬಂತು. ತನ್ನ ಮೂಲಭೂತ ಹಕ್ಕನ್ನು ಚಲಾಯಿಸುವುದಕ್ಕೆ ಅವನಿಗೆ ಪರಿಪೂರ್ಣವಾದಂಥ ಅವಕಾಶ ಇರಬೇಕು, ಯಾವುದೇ ಕಾರಣದಿಂದ ಅವನ ಹಕ್ಕಿಗೆ ಚ್ಯುತಿ ಬರತಕ್ಕಂಥ ಕೆಲಸವನ್ನು ನಾವು ಎಂದೂ ಕೂಡ ಮಾಡಬಾರದು. ಆದರಲ್ಲೂ ಕೂಡ ರಾಜ್ಯಾಂಗ ನಮಗೆ ಶಾಶ್ವತ. ಅದೇ ನಮ್ಮ ಸಾರ್ವಭೌಮತ್ವವನ್ನು ಎತ್ತಿ ಹಿಡಿಯತಕ್ಕಂಥ ಕಾನೂನಿನ ಒಂದು ವ್ಯವಸ್ಥೆ. ಉಳಿದೆಲ್ಲಾ ಶಾಸನಗಳೂ ಕೂಡ ಅದರ ಅಧೀನದಲ್ಲಿ ಬರತಕ್ಕಂಥವು. ರಾಜ್ಯಾಂಗವೇ ನಮಗೆ ಮೂಲಭೂತ ಹಕ್ಕನ್ನು, ವಾಕ್ ಸ್ವಾತಂತ್ರ್ಯವನ್ನು ಕೊಟ್ಟಿರಬೇಕಾದರೆ, ಅದನ್ನು ಕಿತ್ತುಕೊಳ್ಳತಕ್ಕಂಥ ಒಂದು ಅಡಿಯಾಳಾದಂಥ ಶಾಸನವನ್ನು ನೀವು ತರುವುದಕ್ಕೆ

ಹೊರಟರೆ ಅದು ಬಾಧಕಗಳನ್ನು ಜಾಸ್ತಿ ಮಾಡುತ್ತದೆ. ಆದ್ದರಿಂದ ಅದಕ್ಕೆ ಬದಲಾಗಿ ಈ ನಮ್ಮ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಸಭೆಗಳಿಗೆ ನಾವು ಕೋರಂ ಅನ್ನು ವಿಧಿಸುತ್ತೇವೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಗೆ ಕರೆದಂಥ ಸಭೆಗಳಿಗೆ ಕೋರಂನ ಅಗತ್ಯ ಇರುವುದಿಲ್ಲ. ಆದ್ದರಿಂದ ಒಂದೇ ಪದದಿಂದ, ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಗೆ ಕರೆದಂಥ ಸಭೆಗೆ ಕೋರಂನ ಅಗತ್ಯವಿಲ್ಲ ಎನ್ನುವ ಒಂದು ಪದವನ್ನು ಸೇರಿಸಕೊಂಡರೆ ಸಾಕಾಗುತ್ತದೆ. ಆಗ ಒಬ್ಬ ಅರ್ಜಿ ಹಾಕಿದರೂ ಕೂಡ ಅವರು ಆಯ್ಕೆಯಾಗುತ್ತಾರೆ ಅಥವಾ ಬೇರೆ ಹತ್ತು ಜನ ಹಾಕಿದ್ದರೆ ಕನ್‌ಟೆಸ್ಟ್ ಆಗುತ್ತದೆ. ನಮ್ಮ ಶ್ರೀಮಾನ್ ರಾಮಕೃಷ್ಣರವರು ಕನಕಪುರದಲ್ಲಿ ನಡೆದಂಥ ಒಂದೆರಡು ಸನ್ನಿವೇಶಗಳನ್ನು ಹೇಳಿದಾಗ, ಒಬ್ಬರೇ ಅಭ್ಯರ್ಥಿ ಒಂದು ಅರ್ಜಿ ಹಾಕಿದರೆ, ಯಾರು ಬರದಿದ್ದರೂ ಕೂಡ ಅವರು ಅವಿರೋಧವಾಗಿ ಆಯ್ಕೆಯಾಗುತ್ತಾರೆ. ಆದ್ದರಿಂದ ಪ್ರಕಾಶ್‌ರವರಿಗೆ ಇದು ಒಂದು ವಿಶೇಷವಾದ ಸಂದರ್ಭ ಇಲ್ಲಿ ಬಂದಿರಬಹುದು, ಮುಂದೆ ಇನ್ನೂ ಇಂಥಹ ಸನ್ನಿವೇಶಗಳು ಕೂಡ ಬರಬಹುದು. ಆದ್ದರಿಂದ ಈ ಒಂದು ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಭೆಗೆ ಕೋರಂನ ಅಗತ್ಯ ಇಲ್ಲ ಎಂದು ತರತಕ್ಕಂಥಾದ್ದು ಒಂದು. ಎರಡನೆಯದು, ಇದರಿಂದ ನಾವು ಬೇರೆ ಸಭೆಗಳಿಗೂ ಮತ್ತು ವಿಶೇಷವಾಗಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಗೆ ಕರೆದಂಥ ಸಭೆಗೂ ವ್ಯತ್ಯಾಸ ಇದೆ ಎನ್ನತಕ್ಕಂಥಾದ್ದನ್ನು ನಾವು ತೋರಿಸಿ ಕೊಟ್ಟ ಹಾಗೆ ಆಗುತ್ತದೆ. ಆ ದೃಷ್ಟಿಯಿಂದ ತಾವು ಇದನ್ನು ಪರ್ಯಾಲೋಚನೆ ಮಾಡತಕ್ಕಂಥಾದ್ದು ಸೂಕ್ತ ಇದೆ. ಜೊತೆಗೆ ನಮ್ಮ ಪ್ರಮೀಳರವರು, ಅಧ್ಯಕ್ಷರು ಇಲ್ಲಿ ಕುಳಿತು ಮಾತನಾಡುವಾಗ ಒಂದು ಪ್ರಸ್ತಾಪ ಮಾಡಿದರು. ಎರಡನೇ ತಿದ್ದುಪಡಿ ಸಂದರ್ಭದಲ್ಲಿ ಈಗ ತಾವು 20 ತಿಂಗಳಿಗೆ ಇಳಿಸಿದ್ದೀರಿ. ಇದನ್ನು ನಾನು ಬಹಳ ಪ್ರಬಲವಾಗಿ ವಿರೋಧ ಮಾಡುತ್ತೇನೆ.

ಇದಕ್ಕೆ ಶಾಸ್ತ್ರ ಏನು ಇದೆ? ಲಾಜಿಕ್ ಏನಿದೆ? ಕಾರಣ ಏನಿದೆ? ಹೊರಗಡೆ ನಾವು ಕಾನೂನನ್ನು ತಂದು ಜಾರಿಗೆ ಕೊಟ್ಟು, ಚುನಾವಣೆ ನಡೆದು, ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಯತಕ್ಕಂಥ ಕಾಲದಲ್ಲಿ ಬಹಿರಂಗಪಡಿಸಿಕೊಂಡಿದ್ದೇವೆ, ನಮ್ಮನ್ನು ನಾವು ಅರ್ಪಿಸಿಕೊಂಡಿದ್ದೇವೆ, ಈ ಸ್ಥಾನಗಳು 5 ವರ್ಷ ಇರತಕ್ಕಂಥಾದ್ದು ಎಂದು. ಅವರು ಅವರವರಲ್ಲೇ ವಿಶ್ವಾಸದಿಂದ ಹೊಂದಾಣಿಕೆ ಮಾಡಿಕೊಂಡಿದ್ದರೆ ಅದು ಅವರಿಗೆ ಬಿಟ್ಟಿಂಥಾದ್ದು. ಒಂದು ವರ್ಷಕ್ಕೆ ಬಿಡಬಹುದು, ಆರು ತಿಂಗಳಿಗೇ ಬಿಡಬಹುದು, ಮತ್ತೊಂದು ನಡೆಯಲಿ. ಆದರೆ ನಾವು 20 ತಿಂಗಳಿಗೆ ಎಂದು ಒಂದು ಕಾನೂನನ್ನು ಮಾಡಿದರೆ, ಅಂದರೆ ಈ ನಮ್ಮ ಸ್ಥಳೀಯ ಸಂಸ್ಥೆಗಳು ಹುಟ್ಟಿದ್ದು ಯಾವ ಕಾರಣಕ್ಕಾಗಿ? ರಾಜಕೀಯ ಸ್ಥಾನಮಾನಗಳನ್ನು ಹಂಚಿಕೊಳ್ಳುವುದಕ್ಕೋಸ್ಕರವೋ ಅಥವಾ ಸ್ಥಳೀಯವಾದಂಥ ಅಭಿವೃದ್ಧಿಯನ್ನು ಸಾಧಿಸಿ, ಸ್ಥಳೀಯವಾದಂಥ ಪ್ರಬಲವಾದ ಒಂದು ಮುಖಂಡತ್ವವನ್ನು ಬೆಳೆಸುವುದಕ್ಕೋ? ವಿಶೇಷವಾಗಿ ಗಮನ ಹರಿಸಿ, ವೈಚಾರಿಕವಾಗಿ, ಬುದ್ಧಿ ಪೂರ್ವಕವಾಗಿ ಆಲೋಚನೆ ಮಾಡೋಣ, ಪ್ರಜ್ಞಾಪೂರ್ವಕವಾಗಿ ಚಿಂತನೆ ಮಾಡೋಣ. ಇದು ತೀರ ಹೋಗಿಹೋಗಿ 20 ತಿಂಗಳು ಆಯಿತು. ಬೇರೆ ಯಾರಾದರೂ ಬಂದು, ಇದು ಬೇಡ ವರ್ಷಕ್ಕೆ ಒಂದು ಮಾಡೋಣ ಎಂದು ಹೇಳುತ್ತಾರೆ. ಏಕೆಂದರೆ ಹಿಂದೆ ಕಾರ್ಪೋರೇಷನ್ನಿನಲ್ಲಿ ಒಂದು ವರ್ಷಕ್ಕೆ ಒಂದು ಸಾರಿ ಚುನಾವಣೆ ನಡೆಯುತ್ತಿತ್ತು. ಮೂರು ತಿಂಗಳು, ಆರು ತಿಂಗಳು ಬರೀ ಇದರಲ್ಲೇ ಆಗುತ್ತಿತ್ತು. ಎರಡು ತಿಂಗಳು ಚುನಾವಣೆಗೋಸ್ಕರ ಸಿದ್ಧತೆ ಮಾಡುವುದು. ಅವನು ಅಲ್ಲಿ ಕುಳಿತುಕೊಂಡು ತಯಾರಿ ಮಾಡುವುದು ಮತ್ತೆ ಎರಡು ತಿಂಗಳು. ಆದ್ದರಿಂದ ಒಂದು ವರ್ಷದಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ಇದರಿಂದ ಮುಂದೆ ಯಾರಾದರೂ ಬಂದು ಒಂದು ವರ್ಷದ ಅವಧಿ

ಮಾಡೋಣ ಎಂದು ಹೇಳುತ್ತಾರೆ. ಏಕೆಂದರೆ ನಮ್ಮಲ್ಲಿ ಕಾರ್ಯಕರ್ತರು ಜಾಸ್ತಿ ಇದ್ದಾರೆ. ಎಲ್ಲರಿಗೂ ಆಸೆ ಇದೆ. ನಾನೂ ಆಗಬೇಕು, ನಾನೂ ಆಗಬೇಕು ಎಂದು ಎಲ್ಲರಿಗೂ ಆಸೆ ಇದೆ. ಈಗ ಮುಖ್ಯ ಮಂತ್ರಿಗಳಾಗಬೇಕು ಎಂದು ಅನೇಕರಿಗೆ ಆಸೆ ಇದೆ, ಆದರೆ ಆಗಲು ಆಗುವುದಿಲ್ಲ. ಶಾಸಕರಾಗಬೇಕು ಎಂದು ಎಲ್ಲರಿಗೂ ಆಸೆ ಇರುತ್ತದೆ, ಎಲ್ಲರೂ ಆಗುವುದಕ್ಕೆ ಆಗುವುದಿಲ್ಲ. ಅದಕ್ಕೆ ಸೀಮಿತವಾದಂಥ ಕ್ಷೇತ್ರ, ಸೀಮಿತವಾದಂಥ ಮಾನಗಳು ಇರುತ್ತವೆ. ಆಸೆ ಇರುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಎಲ್ಲರೂ ಆದೇ ಆಸೆಯನ್ನು ತಲೆಯ ಮೇಲೆ ಹೊತ್ತರೆ, ಪರ್ಯಟನೆ ಮಾಡುತ್ತಾ ಕುಳಿತುಕೊಂಡರೆ ವ್ಯವಸ್ಥೆ ಏನಾಗಬಹುದು? ಯಾರಾದರೂ ತ್ಯಾಗ ಮಾಡಲೇ ಬೇಕು. ಯಾರಾದರೂ ಸ್ಥಾನದಲ್ಲಿ ಹೋಗಲೇ ಬೇಕು, ಆ ಜವಾಬ್ದಾರಿಯನ್ನು ನಿರ್ವಹಿಸಲೇ ಬೇಕು, ಒಳ್ಳೆಯ ಮುಖಂಡತ್ವ ಬೆಳೆಯಬೇಕು. ಏಕೆಂದರೆ ಎಲ್ಲದಕ್ಕಿಂತ ಹೆಚ್ಚಾಗಿ ಅದು ತಾಲ್ಲೂಕು ಪಂಚಾಯಿತಿ ಆಗಬಹುದು, ಜಿಲ್ಲಾ ಪಂಚಾಯಿತಿ ಆಗಬಹುದು, ಅಭಿವೃದ್ಧಿಯ ಕಾರ್ಯಕ್ಕೋಸ್ಕರವೇ ಸೀಮಿತವಾಗಿರತಕ್ಕಂಥ ಕ್ಷೇತ್ರ ಆದು. ಅಲ್ಲಿ ಇಡೀ ನನ್ನ ದೇಹವನ್ನು ಶ್ರಮವನ್ನು ಚಿಂತನೆಯನ್ನು ಆಲೋಚನೆಯನ್ನು ಸಂಪೂರ್ಣವಾಗಿ ಆ ತಾಲ್ಲೂಕಿನ, ಆ ಜಿಲ್ಲೆಯ ಅಭಿವೃದ್ಧಿಗೋಸ್ಕರವಾಗಿ ಅರ್ಪಿಸಿಕೊಳ್ಳಬೇಕು.

(ಈ ಹಂತದಲ್ಲಿ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಈ ಅರ್ಪಣಾ ಮನೋಭಾವ ಇದ್ದರೆ ಅಭಿವೃದ್ಧಿ ಸಾಧನೆಯಾಗುತ್ತದೆ. ಅಂಥ ಕ್ಷೇತ್ರವನ್ನು, ಅಂಥ ಒಂದು ವಸ್ತುಸ್ಥಿತಿಯನ್ನು ಬೆಳೆಸಬೇಕಾದಂಥ ಅಗತ್ಯ ಇವತ್ತು ಇದೆ. ಏಕೆಂದರೆ ನಾನು ಹೊಸದೇನೂ ತಮಗೆ ಹೇಳಬೇಕಾದಂಥ ಅಗತ್ಯವಿಲ್ಲ. ತಾವು ಈ ವಿಚಾರದಲ್ಲಿ ಸಂಪೂರ್ಣವಾಗಿ ಬದ್ಧರಾಗಿರತಕ್ಕಂಥ ಒಬ್ಬ ಮಂತ್ರಿಗಳು. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ನಿಮ್ಮಂಥವರ ಹಸ್ತದಿಂದ, ನಮ್ಮ ಈ ಸದನದ ಹೊರಗಡೆ ನಡೆಯತಕ್ಕಂಥ ರಾಜಕಾರಣದ ಅನೇಕ ತೃಪ್ತಿಗಳಿಗೋಸ್ಕರವಾಗಿ, ನಿಮ್ಮ ಕಾರ್ಯಕರ್ತರನ್ನು ತೃಪ್ತಿಪಡಿಸುವುದಕ್ಕೋಸ್ಕರವಾಗಿ, ಈ ಸ್ಥಾನದ ಬಲವನ್ನು ಏಕೆ ಕಡಿಮೆ ಮಾಡುವುದಕ್ಕೇ ಹೋಗುತ್ತೀರಿ? ಯಾವನೋ ಒಬ್ಬ ಪ್ರತಿಭೆ ಇರತಕ್ಕಂಥ ಒಬ್ಬ ಮನುಷ್ಯ, ಯಾವನಾದರೂ ಸಾಕಷ್ಟು ಬೆಂಬಲವನ್ನು ಪಡೆದಿರತಕ್ಕಂಥ ಒಬ್ಬ ಮನುಷ್ಯ 5 ವರ್ಷ ಆಡಳಿತ ನಡೆಸತಕ್ಕಂಥ ಸ್ಥಿತಿಗೆ ಬಂದಿದ್ದರೆ, ಅವನನ್ನು ಏಕೆ ನೀವು ತುಳಿಯುವುದಕ್ಕೆ ಹೋಗುತ್ತೀರಿ? ಇದರಿಂದ ನಿಮಗೆ ಬರುವ ಸಂಪಾದನೆ ಏನು? ಒಬ್ಬ ಒಳ್ಳೆಯ ಮುಖಂಡ ಬೆಳೆದರೆ ಏಕೆ ನಾವು ಅಡ್ಡಿಯಾಗಬೇಕು? ಇಲ್ಲಿ ನಾವೇ ನೂರುಕಾಲ ಶಾಸಕರಾಗಿ, ಲೋಕಸಭಾ ಸದಸ್ಯರಾಗಿ ಗೂಟ ಹಾಕಿಕೊಂಡು ಕುಳಿತಿರುತ್ತೇವೆಯೇ? ಹುಟ್ಟಿದ ಮನುಷ್ಯ ಸಾಯುತ್ತಾನೆ. ನಾವು ಇವತ್ತು ಇರಬಹುದು, ನಾಳೆ ಇಲ್ಲದೇ ಇರಬಹುದು. ಹೊಸಹೊಸ ಮುಖಂಡತ್ವ ಬೇಕು, ಹೊಸ ಹೊಸ ವಿಚಾರಗಳನ್ನು ಹೊತ್ತು ತರತಕ್ಕಂಥ ಹೊಸ ಹೊಸ ಜನರು ಬೇಕಾಗುತ್ತದೆ. ಅದಕ್ಕೋಸ್ಕರ ರಾಜ್ಯದಲ್ಲಿರತಕ್ಕಂಥ ಅನೇಕ ಜನ 5 ವರ್ಷ ಆಡಳಿತ ಮಾಡತಕ್ಕಂಥ ಒಂದು ಬಹುಮತವನ್ನು ಸಂಪಾದನೆ ಮಾಡಿಕೊಂಡಿದ್ದರೆ, ಜನಪ್ರಿಯವಾಗಿದ್ದರೆ, ಅವನು ಆ 5 ವರ್ಷ ಆಡಳಿತ ನಡೆಸುವುದಕ್ಕೆ ಏಕೆ ನೀವು ಅವಕಾಶ ಮಾಡಿಕೊಡಬಾರದು? ಈ ಒಂದು ತಿದ್ದುಪಡಿ ತರುವುದರಿಂದ ಅನಾವಶ್ಯಕವಾಗಿ ಮಲಗಿರತಕ್ಕಂಥ ಹುಲಿಯನ್ನು ನೀವಾಗಿ ಎಬ್ಬಿಸಿ, ಜನರ ಮನಸ್ಸನ್ನು ಕೆಡಿಸುವುದಕ್ಕೆ ಎಷ್ಟು ಬೇಕೋ ಅಷ್ಟು ವ್ಯವಸ್ಥೆ ಮಾಡಿ ಇಡುತ್ತೀರಿ. ಜೊತೆಗೆ, ನಮ್ಮ ಪ್ರಮೀಳಾದೇವಿಯವರು ಆಗಲೇ ಹೇಳುತ್ತಿದ್ದರು. ಇದನ್ನೇನೋ ತಂದಿದ್ದೀರಿ. ಈಗ ನಾವು ರೋಸ್ಟರ್ ಸಿಸ್ಟಂ ಪ್ರಕಾರ ಈ ಅಧ್ಯಕ್ಷರ

ಮತ್ತು ಉಪಾಧ್ಯಕ್ಷರ ಸ್ಥಾನವನ್ನೂ ಕೂಡ ನಾವು ಮಾಡಿ ಬಿಟ್ಟಿದ್ದೇವೆ. ಈಗ ಅವರು ಹೇಳುವ ಪ್ರಕಾರ ನೀವು ಅದಕ್ಕೆ ತಂದಿಲ್ಲ ಉದಾಹರಣೆಗೆ, ನಮ್ಮ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ತಾಲ್ಲೂಕು ಪಂಚಾಯಿತಿ ಇದೆ. ಅಲ್ಲಿ ಬಿ ಗ್ರೂಪ್‌ಗೆ ಮಹಿಳೆ ಬೇಕು. ಬಿ ಗ್ರೂಪಿಗೇ ಅದು ಮೀಸಲಾಗಿದೆ. ಅಲ್ಲಿ ಆರಿಸಿ ಬಂದವರು ಇವರು ಒಬ್ಬರೇ. ಯಾವ ಪಕ್ಷದವರು ಮಾಡಿದರೂ ಅವರನ್ನೇ ಮಾಡಬೇಕು. ಇಬ್ಬರು ಬಂದಿದ್ದಾರೆಯೇ? ಈಗ ಈ ರೊಟೇಷನ್‌ನಲ್ಲಿ ಮತ್ತೆ ಅವರೇ ಬರುತ್ತಾರೆ. 20 ತಿಂಗಳಿಗೆ ನಿಲ್ಲಿಸಿ, ಮತ್ತೆ ಒಬ್ಬರೇ ಇದ್ದರು, ಅಕಸ್ಮಾತ್ತಾಗಿ ಒಬ್ಬರೇ ಆರಿಸಿ ಬಂದವರು ತೀರಿ ಹೋಗಬಹುದು ಅಥವಾ ರಿಟೈರ್ ಆಗಬಹುದು, ರಾಜೀನಾಮೆ ಕೊಡಬಹುದು ಒಬ್ಬರೇ ಇದ್ದರು ಎಂದು. ಆಗ ಈ 20 ತಿಂಗಳು ಆದಮೇಲೆ ಮತ್ತೆ ಚುನಾವಣೆ ನಡೆದರೆ ಅವರೇ ಮತ್ತೆ ಬರಬೇಕು. ಅದರಿಂದ ಏನು ಉದ್ದೇಶ ಸಾಧನೆಯಾಯಿತು? ಏಕೆಂದರೆ 5 ವರ್ಷ ಇರತಕ್ಕಂಥಾದ್ದಕ್ಕೆ ಹಿಂದೆ ಸಾಕಷ್ಟು ಚರ್ಚೆಗಳು ನಡೆದಿವೆ, ತಾವು ಮಂಡಲ ಪಂಚಾಯಿತಿ. ಜಿಲ್ಲಾ ಪಂಚಾಯಿತಿ ಕಾನೂನನ್ನು ತಂದು, ಜಾರಿಗೆ ಕೊಟ್ಟು ಆಡಳಿತ ನಡೆಸಿದ ಸಂದರ್ಭದಲ್ಲಿ ಕೂಡ 5 ವರ್ಷವೇ ಅದಕ್ಕೆ ಇದ್ದಂಥ ಅವಧಿ. ಅದೇ ಪ್ರಕಾರವಾಗಿ ಪುರಸಭೆಗಳಲ್ಲಿ ಕೂಡ 4 ವರ್ಷ ಇತ್ತು. ಈಗ ಅದನ್ನೂ ಕೂಡ 5 ವರ್ಷಕ್ಕೆ ನಾವು ಏರಿಸಿದ್ದೇವೆ. ಒಂದು ವ್ಯವಸ್ಥೆಯನ್ನು ಸ್ಟೆಬಲೈಸ್ ಮಾಡಬೇಕು, ಮುನಿಸಿಪಲ್ ಆಕ್ಟ್ ಪ್ರಕಾರ ನಾವು ಸ್ಟೆಬಲೈಸ್ ಮಾಡಬೇಕು. ಏಕೆಂದರೆ ನಾವು ಅದನ್ನು ತಹಬಂದಿಗೆ ತಂದು, ಅದನ್ನು ಬೆಳೆಸದೇ ಹೋದರೆ ಸಮಾಜದಲ್ಲಿ ನಾಯಕತ್ವ ಪಡೆಯತಕ್ಕಂಥ ಜನ ಬಹಳಷ್ಟು ಆಸೆಗೆ ಒಳಗಾಗತಕ್ಕಂಥ ಸಂದರ್ಭಗಳು ಬರುತ್ತವೆ. ಪಂಚಾಯಿತಿಗೆ ಚುನಾವಣೆ ನಾವು ಇದ್ದಂಥ ಕಾಲದಲ್ಲಿ ಆಗಿದ್ದು, ನೀವು ಬಂದಥ ಕಾಲದಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ಮಾಡಿಬಿಟ್ಟಿರಿ. ಚುನಾವಣೆ ಎದುರಿಸತಕ್ಕಂಥ ಕಾಲದಲ್ಲಿ ನಿಮಗೆ ಹೊಳೆಯಲಿಲ್ಲ. ಆಗ ನೀವೇ ಸರ್ಕಾರದಲ್ಲಿದ್ದಿರಿ. ನಿಮ್ಮ ಸರ್ಕಾರ ಇದ್ದು ತಾಲ್ಲೂಕು ಪಂಚಾಯಿತಿಗೆ, ಜಿಲ್ಲಾ ಪಂಚಾಯಿತಿಗೆ ಚುನಾವಣೆ ಮಾಡಿದಿರಿ. ನಿಜವಾಗಿ ನಿಮ್ಮ ಮನಸ್ಸಿನಲ್ಲಿ ಈ ದೃಷ್ಟಿಕೋನ ಅಭಿವ್ಯಕ್ತವಾಗಿದ್ದರೆ ಆಗ ನೀವೇ ಮಂತ್ರಿಗಳು ಕೂಡ ಆಗಿದ್ದಿರಿ, ಈ ದೃಷ್ಟಿ ಕೋನ ನಿಮ್ಮಲ್ಲಿ ಅಭಿವ್ಯಕ್ತವಾಗಿದ್ದರೆ, ಬಹುಶಃ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳುತ್ತಿದ್ದಿರಿ, ಜನರಿಗೆ ಆಶ್ವಾಸನೆ ಕೊಡುತ್ತಿದ್ದಿರಿ ನಾವು ಚುನಾವಣೆ ಮಾಡಿದ ಮೇಲೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನವನ್ನು 20 ತಿಂಗಳಿಗೆ ಇಳಿಸುತ್ತೇವೆ ಎಂದು ಹೇಳುತ್ತಿದ್ದಿರಿ. ಆ ಕೆಲಸ ನೀವು ಮಾಡಲಿಲ್ಲ. ಕಾನೂನು ಪ್ರಕಾರ 5 ವರ್ಷದ ಅವಧಿ ಏನಿತ್ತು, ಅದೇ ಸರಿ ಎಂದು ಚುನಾವಣೆ ಮಾಡಿ, ಇವತ್ತು 5 ವರ್ಷದ ಅವಧಿ ಎಂದು ತಿಳಿದುಕೊಂಡು ಕೆಲವರು ಅಧ್ಯಕ್ಷರು, ಉಪಾಧ್ಯಕ್ಷರಾಗಿದ್ದಾರೆ, ಈಗ ಅವರನ್ನು ಕೆಳಗಡೆಯಿಂದ ಕಾಲು ಕತ್ತರಿಸುವ ಕೆಲಸ ನೀವು ಮಾಡುತ್ತಿದ್ದೀರಲ್ಲಾ, ಇದು ಕೃತಿಚೌರ್ಯ ಆಗುವುದಿಲ್ಲವೇ ಆತ್ಮದ್ರೋಹ ಆಗುವುದಿಲ್ಲವೇ? ಜನರಿಗೆ ವಂಚನೆ ಮಾಡಿದಂತೆ ಆಗುವುದಿಲ್ಲವೇ?

ಮಾನ್ಯ ಸದಸ್ಯರು : ನೀವು ಜಿಲ್ಲಾ ಪರಿಷತ್ತು ಚುನಾವಣೆ ಮಾಡುತ್ತೇವೆ ಎಂದು ಹೇಳಿ ಪೋಸ್ಟಪೋನ್ ಮಾಡಿದಿರಿ. ಆಗ ಅದು ಆತ್ಮ ವಂಚನೆ ಆಗಲಿಲ್ಲವೇ? ತಾವು ಅಧಿಕಾರದಲ್ಲಿದ್ದಾಗ ತಾಲ್ಲೂಕು ಸಮಿತಿಗೆ ಜಿಲ್ಲಾ ಸಮಿತಿಗೆ ಚುನಾವಣೆ ನಡೆಸುತ್ತೇವೆ ಎಂದು ಹೇಳಿ ಅದನ್ನು ಪೋಸ್ಟ್‌ಪೋನ್ ಮಾಡಿಕೊಂಡು ಬಂದಿರಲ್ಲಾ ಆಗೇನು ಆತ್ಮವಂಚನೆ ಆಗಲಿಲ್ಲವೇ? ಇದಕ್ಕೆ ಏನು ಹೇಳುತ್ತೀರಿ, ಹೇಳಿ ಚುನಾವಣೆ ಮಾಡಲೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಮಾಡಿದಿರಿ. ಏಕೆಂದರೆ ನಿಮಗೆ ಆಫ್ಟರ್ ಥಾಟ್ ಅಂದರೆ ಅಮೇಲೆ ಇವರಿಗೆ ಪ್ರಜ್ಞೆ ಬಂತು. ಏಕೆ ಬಂತು ಎಂದರೆ ಚುನಾವಣೆಯಾದ ಮೇಲೆ ಎಲ್ಲಾ ಕಡೆ ಅಧ್ಯಕ್ಷರನ್ನು ಮಾಡಿದರು, ಎಲ್ಲಾ ಕಚ್ಚಾಟ ಜಾಸ್ತಿಯಾಯಿತು. ಕಚ್ಚಾಟ ಜಾಸ್ತಿಯಾದಮೇಲೆ ಆದರಲ್ಲೂ ಕೂಡ ನಮ್ಮ ಮುಖ್ಯ ಮಂತ್ರಿಗಳು ಇದ್ದಾರಲ್ಲಾ, ಬಹಳ ಜಾಸ್ತಿ ಕಚ್ಚಾಟ ಶುರುವಾದರೆ, ಎಲ್ಲಾದರೂ ಹೋಗಿ ಕುಳಿತುಕೊಂಡು ಬಿಡುತ್ತಾರೆ. ಇವತ್ತೇ ಅಲ್ಲ, ಏಕೆಂದರೆ 2-3 ಸಲ ತಾವು ನೋಡಿದ್ದೀರಿ, ಬಹಳ ಗದ್ದಲವಾಯಿತು, ಬಹಳ ಬಿಸಿಬಿಸಿ ಚರ್ಚೆಯಾಯಿತು ಎಂದರೆ, ಸ್ವಲ್ಪ ಗಲಾಟೆಯಾಗಿ, ನಾವು ಹೆಚ್ಚು ಉತ್ತರ ಕೊಡಬೇಕು, ಅದು ಕೊಡಬೇಕು, ಇದು ಕೊಡಬೇಕು ಎಂದರೆ ಕಡೆಗೆ ಸಿಟ್ಟು ಮಾಡಿಕೊಂಡು, ನಾನು ಮಾತನಾಡುವುದಿಲ್ಲ ಎಂದು ಸುಮ್ಮನೆ ಕುಳಿತು ಬಿಡುತ್ತಾರೆ. ಹಾಗಾಗಿ ಇವತ್ತು ಈ ರಾಜಕೀಯವೇ ಗೊಂದಲಮಯದ ವಾತಾವರಣದಲ್ಲಿ ನಾವಿದ್ದೇವೆ. ಆದ್ದರಿಂದ ಇವತ್ತು, ಚುನಾವಣೆ ಆದನಂತರ, ನೀವು ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಕೂರಿಸಿದ ಮೇಲೆ, ಆ ಕಾಲದಲ್ಲಿ ನಿಮ್ಮ ಪಕ್ಷದ ಕಾರ್ಯಕರ್ತರ ಮಧ್ಯದಲ್ಲಿ ಒತ್ತಾಯ ಜಾಸ್ತಿಯಾದ ಮೇಲೆ ಅಥವಾ ನಮ್ಮಲ್ಲೂ ಕೆಲವು ಬಂದಿರಬಹುದು, ಇಲ್ಲ ಎಂದು ಹೇಳುವುದಿಲ್ಲ. ಒಂದು ವಾತಾವರಣ ನಿರ್ಮಾಣವಾಗಿ, ನಾನೂ ಆಗಬೇಕು ನಾನೂ ಆಗಬೇಕು ಎನ್ನುವ ಒಂದು ಒತ್ತಾಯ ಬಂದ ಕಾರಣಕ್ಕಾಗಿ, ಆ ಒತ್ತಾಯವನ್ನು ನೀವು ಸಹಿಸಿಕೊಳ್ಳುವುದಕ್ಕೆ ಆಗದೇ, ನಿಮ್ಮ ವಿಫಲತೆಯನ್ನು ತೋರಿಸಿಕೊಂಡಿದ್ದೀರಿ ಈ ಒಂದು ತಿದ್ದುಪಡಿಯನ್ನು ತರುವ ಮುಖಾಂತರ.

ಏಕೆಂದರೆ ನಾವು ರಾಜಕೀಯವಾಗಿ ಬಿಲ್‌ಗೆ ತಿದ್ದುಪಡಿ ತರಬೇಕಾದರೆ ಅದಕ್ಕೆ ಸ್ವಲ್ಪ ಸಮರ್ಥನೆ, ಆತ್ಮಬಲ ಇರಬೇಕಾಗುತ್ತದೆ. ನಮಗೆ ವಿಶ್ವಾಸವಿರಬೇಕಾಗುತ್ತದೆ. ಒಂದು ಸಿದ್ಧಾಂತಕ್ಕೆ ಬುನಾದಿ ಹಾಕಿ ನಾವು ಕುಳಿತುಕೊಳ್ಳಬೇಕಾದರೆ ಅಡ್ಡಿ ಅದಕ್ಕೆ ಅಧೀನವಾಗಿರುತ್ತದೆ. ಆದ್ದರಿಂದ ನೀವು ಏನು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅಧಿಕಾರಾವಧಿಯನ್ನು 20 ತಿಂಗಳಿಗೆ ಇಳಿಸಬೇಕೆಂದು ಬಿಲ್‌ನ್ನು ತಂದಿದ್ದೀರೋ ಅದಕ್ಕೆ ಯಾವುದೇ ಲಾಜಿಕ್ ಇಲ್ಲ, ರೀಸನ್ ಇಲ್ಲ, ಮತ್ತು ಇದು ಸಮಯವೂ ಅಲ್ಲ. ಇಂತಹ ತಿದ್ದುಪಡಿಯನ್ನು ಪ್ರಕಾಶ್ ಅಂತಹವರು ಮಂತ್ರಿಯಾಗಿ ತಂದಿಟ್ಟಿದ್ದಾರೆಂದು ಹೇಳಿದರೆ ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ನೀವು ಈ ಚರ್ಚೆಗೆ ವಿಶ್ಲೇಷಣೆ ಮಾಡಿ ಹೇಳತಕ್ಕಂಥ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತಿಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿಯನ್ನು 20 ತಿಂಗಳಿಗೆ ಇಳಿಸಬೇಕಾದಂಥ ಪ್ರಬಲ ಕಾರಣ ಏನಿತ್ತು? ಈ ಬಿಲ್‌ನ್ನು ತಿದ್ದುಪಡಿ ಮಾಡಿ ತರುವಂಥ ಸಂದರ್ಭದಲ್ಲಿ ನೀವು ಸದನಕ್ಕೆ ವಿಶ್ಲೇಷಣೆ ಮಾಡಿ ತಿಳಿಸಿಲ್ಲ. ಇದನ್ನು ಸದನ ತಿಳಿಯಬೇಕಾಗುತ್ತದೆ. ತಿದ್ದುಪಡಿ ತರುವುದಕ್ಕೆ ಕಾರಣವೇನೆಂದು ತಿಳಿಸಬೇಕಾಗಿತ್ತು. ಈ ತಿದ್ದುಪಡಿ ತರುವುದಕ್ಕೆ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳು ಬಂದು ನಿಮಗೆ ಮನವಿ ಸಲ್ಲಿಸಿದ್ದಾರೆಯೇ? ಅಥವಾ ಮುಂದೆ ಅಧ್ಯಕ್ಷರು ಆಗುವಂಥವರು ಬಂದು ಅಧಿಕಾರ ಅವಧಿಯನ್ನು 20 ತಿಂಗಳಿಗೆ ಮಾಡಬೇಕೆಂದು ನಿಮಗೇನಾದರೂ ಮನವಿ ಸಲ್ಲಿಸಿದ್ದಾರೆಯೇ? ಅಥವಾ ನಮ್ಮ ಶಾಸಕರು ಯಾರಾದರೂ ಬಂದು 20ತಿಂಗಳಿಗೆ ಮಾಡಬೇಕೆಂದು ನಿಮಗೆ ಮನವಿ ಸಲ್ಲಿಸಿದ್ದಾರೆಯೇ? ಆದ್ದರಿಂದ ಈ ಸುದ್ದಿ ಇವತ್ತೇ ಕಣ್ಣಿಗೆ ಕಾಣುವುದು.

(ಗೊಂದಲ)

ಏಕೆಂದರೆ ಆ ಪ್ರೇರಣೆಗೆ ಸ್ವಲ್ಪ ಅವಕಾಶ ತಾವು ಮಾಡಿಕೊಟ್ಟಿದ್ದರೆ ಇನ್ನೊಂದು ಲಾಬಿ ಆಗುತ್ತದೆ. ಈ ಅಧ್ಯಕ್ಷರ, ಉಪಾಧ್ಯಕ್ಷರ ಅವಧಿಯನ್ನು ಒಂದು ವರ್ಷಕ್ಕೆ ಏಕೆ ಮಾಡಬಾರದು ಎಂದು ಈಗಾಗಲೇ ಕೆಲವರು ಮಾತನಾಡುತ್ತಿದ್ದರು. ಇದರಿಂದ 5 ವರ್ಷದಲ್ಲಿ 5 ಜನ ಕಾರ್ಯಕರ್ತರನ್ನು ಅಧ್ಯಕ್ಷರನ್ನಾಗಿ ಮಾಡಬಹುದಲ್ಲಾ. ಈಗ ಬಹಳ ಒಳ್ಳೆಯ ಜನ ಇದ್ದಾರೆ ಹೌದು. ನನಗೇನೂ ಚಿಂತೆ ಇಲ್ಲ. ತಾವು ಆ ಅಭಿವೃದ್ಧಿ ಕ್ಷೇತ್ರದಲ್ಲಿ ನಮ್ಮನ್ನು ತೊಡಗಿಸಿಕೊಂಡರೆ 6 ತಿಂಗಳು, ಒಂದು ವರ್ಷದಲ್ಲಿ ಏನು ಮಾಡಬಹುದು ಎನ್ನುವುದನ್ನು ನಾವು ನೀವು ನೋಡಿದರೆ ಗೊತ್ತಾಗುತ್ತದೆ. ವರ್ಷಕ್ಕೊಂದು ಸಾರಿ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆ ಮಾಡೋಣವೆಂದು ಹೇಳುವುದು ಸುಲಭ. ಹಾಗಾದರೆ 20 ತಿಂಗಳಿಗೆ ಮಾಡುವುದನ್ನು ನೀವು ಒಂದು ವರ್ಷಕ್ಕೆ ಮಾಡಬಹುದಾಗಿತ್ತಲ್ಲಾ. ಹಾಗೆಯೇ ಈ ರೀತಿ ಮಾಡುವುದರಿಂದ 5 ಜನರನ್ನು ಅಧ್ಯಕ್ಷರನ್ನಾಗಿ ಮಾಡಬಹುದಲ್ಲವೇ? ಆದರೆ ಏಕೆ ಆ ರೀತಿ ಮಾಡಲಿಲ್ಲ? ಇದಕ್ಕೆ ಏನಾದರೂ ಕೋಜೆಂಟ್ ರೀಸನ್ ಬೇಕಲ್ಲಾ. ಅದಕ್ಕೋಸ್ಕರ ದಯವಿಟ್ಟು ಈಗಲಾದರೂ ಆಲೋಚನೆ ಮಾಡಿ. ನೀವು ತಂದಿರತಕ್ಕಂಥ ಈ 20 ತಿಂಗಳ ಅವಧಿ ಇದೆಯಲ್ಲಾ ಇದು ಕೇವಲ ಪೈಪೋಟಿಗೆ ಅವಕಾಶ ಮಾಡಿ unhealthy competetion within the party workers ಆಗುತ್ತದೆ. ಬಹಳ ಉತ್ಸಾಹದಿಂದ ಕೆಲಸ ಮಾಡತಕ್ಕಂಥ, ಅನುಭವಿ ಇರತಕ್ಕಂಥ ಮತ್ತು ಜನಪ್ರಿಯವಾಗಿರತಕ್ಕಂಥ 5 ವರ್ಷವನ್ನು ಆಡಳಿತ ಮಾಡುವುದಕ್ಕೆ ಒಬ್ಬನಿಗೆ ವ್ಯಕ್ತಿತ್ವ ಮತ್ತು ಅವನಿಗೆ ಚಾಕಚಕ್ಯತೆ ವ್ಯಕ್ತಿತ್ವ ಇದ್ದರೆ, ಅವನನ್ನು ಕೂಡ ಇಂತಹ ಒಂದು ತಿದ್ದುಪಡಿ ತಂದು ಅನಾವಶ್ಯಕವಾದಂಥ ಅವನ ನಾಯಕತ್ವವನ್ನು ಮೊಟಕುಗೊಳಿಸುತ್ತೀರಿ. ಆದ್ದರಿಂದ ನಾನು ಪ್ರಬಲವಾಗಿ ಈ ತಿದ್ದುಪಡಿಯನ್ನು ವಿರೋಧ ಮಾಡುತ್ತೇನೆ. ಜೊತೆಗೆ ಪ್ರಕಾಶ್‌ರವರಿಗೆ ಒಂದು ಕಿವಿ ಮಾತು ಏನೆಂದರೆ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಹಿಂದೆ ಕೂಡ ಕೆಲಸ ಮಾಡಿದ್ದಾರೆ, ಈಗಲೂ ಕೂಡ ಈ ನಮ್ಮ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡಿ ಒಳ್ಳೆಯ ಅನುಭವ ಇದೆ. ಜಯಪ್ರಕಾಶ್ ನಾರಾಯಣ್ ಅಂಥವರ, ಅಶೋಕ್ ಮೆಹ್ತಾರವರ ಸಮಿತಿಗಳನ್ನು, ಎಸ್.ಕೆ.ಡೇ. ಅವರ ವರದಿಯನ್ನು ಎಲ್ಲಾ ಓದಿದ್ದಾರೆ. ಅದೇ ಪ್ರಕಾರವಾಗಿ ಹಿಂದಿನ ಕಾನೂನು ತಂದಂಥ ಸಂದರ್ಭದಲ್ಲಿ ಅವರು ಮಂತ್ರಿಗಳೂ ಕೂಡಾ ಆಗಿದ್ದರು. ಆ ಅನುಭವ ಇರತಕ್ಕಂಥ, ಪ್ರಜ್ಞೆ ಮತ್ತು ವಿಚಾರಗಳನ್ನು ಹೊತ್ತಂಥ ಒಬ್ಬ ವ್ಯಕ್ತಿ ಈ ರೀತಿ ನಮ್ಮ ರಾಜಕೀಯ ಒತ್ತಡಕ್ಕೆ ಮಣಿದು, ಸ್ಥಾನದ ಒಂದು ಮಹತ್ವವನ್ನೇ ಇವತ್ತು ಕೆಳಗೆ ಇಳಿಸಿದ್ದಾರೆ. ಅಂದರೆ, ಒಟ್ಟಾರೆ ನಾನು ಹೇಳುವುದಾದರೆ ಈ ಮಸೂದೆ ಸ್ಥಳೀಯ ಸಂಸ್ಥೆಗಳಿಗೆ ಇದ್ದಂಥ ಸ್ವಾತಂತ್ರ್ಯವನ್ನು ನೀವು ಹರಣ ಮಾಡುತ್ತಿದ್ದೀರಿ ಎಂದು ವ್ಯಥೆ ಮಾತ್ರ ಆಗುತ್ತಿದೆ ಎನ್ನುವ ಮಾತನ್ನು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ ಕ್ಷೇತ್ರ) : ಮಾನ್ಯ ಉಪಾಧ್ಯಕ್ಷರೇ, ಮೊದಲನೆಯದಾಗಿ ನಮ್ಮ ಪರಿಸ್ಥಿತಿ ಏನು ಎಂದು ತಮಗೂ ಕೂಡ ಅರ್ಥವಾಗಿದೆ. ನಾವು ಹೊಸ ಸದಸ್ಯರು. ಎದುರುಗಡೆ ಬೆಂಚಿನವರಿಗೆ ಈ ಬಿಲ್, ಬೇಡಿಕೆ ಬಗ್ಗೆ ಹೀಗೆ ಯಾವುದೇ ಇರಲಿ, ನಾವೆಲ್ಲಾ ಪವರ್ ಆಫ್ ಅಟಾರ್ನಿ ಕೊಟ್ಟ ಹಾಗೆ ಆಗಿ ಬಿಟ್ಟಿದೆ. ಎಲ್ಲರ ಪರವಾಗಿ ಅವರು ಮಾತನಾಡಿದ್ದಾರೆಂದು ನೀವು ತಿಳಿದುಕೊಂಡು ಬಿಟ್ಟರೆ ನಮ್ಮ ರಕ್ಷಣೆಗೆ ಬರುವವರು ಯಾರು ಹೇಳಿ? ಈ ದೃಷ್ಟಿಯಿಂದ ಈ ಬಿಲ್‌ಗಳ ಬಗ್ಗೆ, ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುವಂಥದ್ದು ಇವೆಲ್ಲಾ ನಾವು ಶಾಸಕರಾಗಿ ಮಾಡುವಂಥ ಕೆಲಸಗಳು ಎಂದು ನಾನು ಭಾವಿಸಿಕೊಂಡಿದ್ದೇನೆ. ಈ

ಬಿಲ್‌ಗಳ ಮೇಲೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡದೇ ಹೋದರೆ ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿರತಕ್ಕಂಥ ಮತದಾರರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಮತದಾರರ ಭಾವನೆಯನ್ನು ವ್ಯಕ್ತ ಮಾಡಲಿಕ್ಕೆ ಇರುವಂಥ ವೇದಿಕೆ ಈ ಸದನ. ದಯವಿಟ್ಟು ಇದನ್ನು ಮೊಟಕು ಮಾಡದೇ ಇದ್ದರೆ ತುಂಬಾ ಅನುಕೂಲವಾಗುತ್ತದೆ. ಆದ್ದರಿಂದ ಮಾನ್ಯ ಉಪಾಧ್ಯಕ್ಷರೆ, ಈ ಒಂದು ತಿದ್ದುಪಡಿಯನ್ನು ತರುವ ಸಂದರ್ಭ ಏಕೆ ಬಂತು ಎಂದು ಹೇಳಿದರೆ, ಮಾನ್ಯ ಪ್ರಕಾಶ್‌ರವರ ಸಾರ್ವಜನಿಕ ಜೀವನವನ್ನು ನಾನು ಬಹಳ ಹತ್ತಿರದಿಂದ, ಬಹಳ ಸೂಕ್ಷ್ಮವಾಗಿ ಅವಲೋಕನ ಮಾಡಿದ್ದೇನೆ. ಅವರು ಬಹಳ ಭಾವನಾ ಜೀವಿ. ಬಹಳ ಬೇಗ ನೊಂದು ಕೊಳ್ಳುತ್ತಾರೆ. ಬಹಳ ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳತಕ್ಕಂಥವರು. ನಾನು ಅವರನ್ನು ಅರ್ಥಮಾಡಿಕೊಂಡ ಹಾಗೆ ಈ ಬಿಲ್‌ನ ತಿದ್ದುಪಡಿ ತಂದಿರತಕ್ಕಂಥ ಹಿನ್ನೆಲೆ ಏನೆಂದರೆ, ಕಳೆದ ಕೆಲವಾರು ಸಮಯದಿಂದ ಅವರದೇ ಆಗಿರತಕ್ಕಂಥ ಪಕ್ಷದ ಕೆಲವು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ತಾಲ್ಲೂಕು ಪಂಚಾಯತಿ ಅಧ್ಯಕ್ಷರು ನಡೆದುಕೊಂಡ ರೀತಿಯಿಂದ ಅವರ ಮನಸ್ಸಿನ ಮೇಲೆ ಬಹಳ ದೊಡ್ಡ ಪರಿಣಾಮ ಬೀರಿದೆ. ಕೆಲವು ಅಧ್ಯಕ್ಷರು, ಉಪಾಧ್ಯಕ್ಷರು, ಅಲ್ಲಿರತಕ್ಕಂಥ ಸದಸ್ಯರ ನಡೆವಳಿಕೆಗಳು ಅವರ ಮನಸ್ಸಿನ ಮೇಲೆ ಬಹಳ ಕೆಟ್ಟದ್ದಾಗಿ ಪರಿಣಮಿಸಿದೆ. ಈ ಅಧ್ಯಕ್ಷರ ಉಪಾಧ್ಯಕ್ಷರ ನಡವಳಿಕೆಗಳ ಬಗ್ಗೆ ಪತ್ರಿಕೆಗಳಲ್ಲಿ ವರದಿಗಳು ಬರುತ್ತಿತ್ತು. ಈ ದೃಷ್ಟಿಯಿಂದ ಅಂತಹ ಅಧ್ಯಕ್ಷರು ಉಪಾಧ್ಯಕ್ಷರನ್ನು ಬದಲಾಯಿಸುವುದು ಹೇಗೆಂದು ಹೇಳಿ ಸಚಿವರು ಗೊಂದಲಕ್ಕೆ ಸಿಕ್ಕಿಹಾಕಿಕೊಂಡು ರಾಜಕೀಯವಾಗಿ ಕೂಡ ಗೊಂದಲದಲ್ಲಿ ಇರುವುದರಿಂದಾಗಿ ಈ ತಿದ್ದುಪಡಿಯನ್ನು ತರುವುದರಿಂದ ದಾರಿ ಸುಗಮವಾಗಿ ಮಾಡೋಣ ಎನ್ನುವಂಥ ವ್ಯವಸ್ಥಿತವಾಗಿರತಕ್ಕಂಥ ಪ್ರಯತ್ನ ಅವರದ್ದು ಆಗಿದ್ದರೆ ಬಹುಶಃ ಅವರು ಈ ತಿದ್ದುಪಡಿಯನ್ನು ತಂದಿದ್ದು ಸರಿಯೆಂದು ಹೇಳಿ ನನಗನ್ನಿಸುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಬೀದರ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರೂ ಹಾಗೂ ಅಲ್ಲಿ ಕೆಲವು ಜಿಲ್ಲಾ ಪರಿಷತ್ತಿನ ಸದಸ್ಯರುಗಳ ನಡವಳಿಕೆಗಳ ಬಗ್ಗೆ ಬೀದರ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆಂದು ಹೇಳಿ ಪತ್ರಿಕೆಯಲ್ಲಿ ಸುದ್ದಿ ಬಂದಿತ್ತು. ಅಧ್ಯಕ್ಷರ, ಉಪಾಧ್ಯಕ್ಷರ ಹಾಗೂ ಸದಸ್ಯರುಗಳ ನಡವಳಿಕೆಗಳು ಸರಿಯಿಲ್ಲ. ಯಾವುದೋ ಕಛೇರಿಗೆ ಹೋಗಿ ಬೇಗ ಹಾಕಿದ್ದಾರೆ, ದೈನಂದಿನ ಕೆಲಸಗಳಲ್ಲಿ ಅವರು ಅಡ್ಡಿ ಉಂಟು ಮಾಡುತ್ತಿದ್ದಾರೆ. ನನಗೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಅಧಿಕಾರಿಗಳಲ್ಲಿ ದೊಡ್ಡ ಮೀಟಿಂಗನ್ನು ಮಾಡಿ ಸರ್ಕಾರಕ್ಕೆ ವರದಿಯನ್ನು ಕಳುಹಿಸಿದ್ದಾರೆ. ಇಂತಹ ಅಧ್ಯಕ್ಷರನ್ನು ಬದಲಾವಣೆ ಮಾಡುವುದು ಹೇಗೆ? ಅದಕ್ಕೋಸ್ಕರವಾಗಿ ಈ ಒಂದು ತಿದ್ದುಪಡಿ ತಂದು 20 ತಿಂಗಳುಗಳಲ್ಲಿ ಇನ್ನೊಂದು ಚುನಾವಣೆ ಮಾಡಿದರೆ ಬಹುಶಃ ಇಂಥವರನ್ನು ಸ್ವಲ್ಪ ವ್ಯತ್ಯಾಸ ಮಾಡಿಕೊಂಡು ಏನಾದರೂ ತಹಬಂದಿಗೆ ತರಬಹುದೇನೋ ಎಂದು ಹೇಳಿ ಭಾವನೆ ಮಾಡಿಕೊಂಡಿರಬಹುದೆಂದು ನನ್ನ ಅನಿಸಿಕೆ. ಈಗ ಒಂದು ವ್ಯವಸ್ಥೆಯನ್ನು ದೃಢ ಮಾಡಬೇಕಾದರೆ, ಬಲ ಮಾಡಬೇಕಾದರೆ, ಈ ತಿದ್ದುಪಡಿ ತರುವಂಥ ವ್ಯವಸ್ಥೆಯಲ್ಲಿ ಎಲ್ಲಿ ತಪ್ಪಾಗಿದೆ, ಎಲ್ಲಿ ತಪ್ಪು ಮಾಡುತ್ತಿದ್ದೇವೆ, ಇದರ ಘಾಸಿ ಅಂಶಗಳು ಏನು ಎನ್ನುವಂತ ತೀವ್ರವಾಗಿರತಕ್ಕಂಥ ಪರಿಶೀಲನೆ ನಡೆಯಬೇಕಾಗಿತ್ತು. ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ, ಸಮಗ್ರವಾಗಿ ಅಧ್ಯಯನ ಮಾಡಿ ಅವರು ವರದಿಯನ್ನು ಕೊಡುತ್ತಾರೆ, ಅನಂತರದಲ್ಲಿ ಇದಕ್ಕೆ ಸಮಗ್ರವಾಗಿರತಕ್ಕಂಥ ತಿದ್ದುಪಡಿಯನ್ನು ತರುತ್ತೇವೆಂದು ಹೇಳಿ, ಹಿಂದಿನ ಸಾರಿ ನಾವು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ಪ್ರಕಾಶ್ ರವರು ಹೇಳಿದ್ದರು. ಆ ರೀತಿಯಲ್ಲಿ ಈ ಬಿಲ್‌ಗೆ ತಿದ್ದುಪಡಿಯನ್ನು ತರಲಿಲ್ಲ.

ಹಾಜ್ ಪಾಜ್ ಆಗಿರತಕ್ಕಂಥ ತಿದ್ದುಪಡಿಯನ್ನು ಇವತ್ತು ತಂದಿದ್ದಾರೆ. ಉದಾಹರಣೆಗೆ, ನಮ್ಮಲ್ಲಿ ಪಂಚಾಯಿತಿ ಚುನಾವಣೆಯಲ್ಲಿ ಕೆಲವು ಅಧ್ಯಕ್ಷರ ಉಪಾಧ್ಯಕ್ಷರ ನೇಮಕಕ್ಕೆ ಸೂಚಕರು ಮತ್ತು ಅನುಮೋದಕರೇ ಇಲ್ಲ. ನೀವು ಈ ಬಿಲ್‌ನ 53ನೇ ಪ್ರಕರಣದ ತಿದ್ದುಪಡಿ ಸಂದರ್ಭದಲ್ಲಿ ಅಧ್ಯಕ್ಷರು ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದು ಹೇಗೆ? ಅವರು ಅರ್ಜಿ ಹಾಕುವುದು ಹೇಗೆ? ಇದರ ಬಗ್ಗೆ ಎಲ್ಲೂ ತಿದ್ದುಪಡಿಯಲ್ಲಿ ಹೇಳಿಲ್ಲ. ಇದಕ್ಕೆ ಸೂಚಕರು ಮತ್ತು ಅನುಮೋದಕರು ಇಲ್ಲದೇ ಇದ್ದರೆ ಕೇವಲ ಅರ್ಜಿ ಹಾಕಿದವರು ಎಲ್ಲರೂ ಆಯ್ಕೆಯಾಗುವುದಕ್ಕೆ ಸಾಧ್ಯವೇ? ಏಕೆಂದರೆ ಸಾಮಾನ್ಯವಾಗಿ ಹರಿಜನ, ಮಹಿಳೆ ಇವರನ್ನೆಲ್ಲಾ ಆಯ್ಕೆ ಮಾಡುವುದನ್ನು ತಪ್ಪಿಸುತ್ತಾರೆ ಎನ್ನುವ ದೃಷ್ಟಿಯಿಂದಲೇ ಇದನ್ನು ತರುವುದಾಗಿದ್ದರೆ ಇದಕ್ಕೆಲ್ಲಾ ಸಮಗ್ರವಾಗಿ ತಿದ್ದುಪಡಿಯನ್ನು ತರಬೇಕಾಗಿತ್ತು. ಈಗ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳನ್ನು ಬಲ ಮಾಡಬೇಕಾದರೆ ಕನಿಷ್ಟ 2 ತಿಂಗಳಿಗೆ ಒಂದು ಸಭೆಯನ್ನು ಕರೆಯಲೇ ಬೇಕೆಂದು ನಿಯಮ ಇದೆ. ತಾವು ಏನು ಮಾಡುತ್ತಿದ್ದೀರಿ? ಅಧ್ಯಯನ ಮಾಡಿ ವರದಿಯನ್ನು ತರಿಸಿಕೊಳ್ಳಿ. ನಮ್ಮ ಮುಖ್ಯ ಮಂತ್ರಿ ಇರತಕ್ಕಂಥ ಶಿವಮೊಗ್ಗ ಜಿಲ್ಲಾ ಪರಿಷತ್ತಿನ ಸಭೆಯನ್ನೆ ನಡೆಸದೆಯೇ ಎರಡೂವರೆ ತಿಂಗಳು ಆಯಿತು. ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅಲ್ಲಿ ನಿಮ್ಮ ಪಕ್ಷದ ಆಡಳಿತ ಇರುವುದು. ತೀರ್ಥಹಳ್ಳಿಯಲ್ಲಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಸಭೆಯನ್ನು ಕರೆಯದೆಯೇ ಎರಡೂವರೆ ತಿಂಗಳು ಆಯಿತು. ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇದರ ಬಗ್ಗೆ ಏನಾದರೂ ಸಮಗ್ರವಾದಂಥ ಅಧ್ಯಯನ ಮಾಡಿ ಅವರ ಮೇಲೆ ಕಠಿಣವಾಗಿರತಕ್ಕಂಥ ದಂಡವನ್ನು ವಿಧಿಸತಕ್ಕಂಥ ಒಂದು ವ್ಯವಸ್ಥಿತವಾಗಿರತಕ್ಕಂಥ ತಿದ್ದುಪಡಿಯನ್ನು ನೀವು ತಂದಿದ್ದರೆ ನಾವು ಎಲ್ಲವನ್ನೂ ಕೂಡ ಒಪ್ಪಬಹುದಾಗಿತ್ತು. ಆ ರೀತಿಯಲ್ಲಿ ನೀವು ತಿದ್ದುಪಡಿಯನ್ನು ತರಲಿಲ್ಲ. ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಬಂದು ಕುಳಿತುಕೊಳ್ಳುತ್ತಾರೆ. ಅದೇ ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರಿಗೆ ಕುಳಿತುಕೊಳ್ಳುವ ಹಕ್ಕು ಇಲ್ಲ. ಇದರ ಬಗ್ಗೆ ಹಿಂದಿನ ಸಲ ಕೂಡ ನಾವು ಹೇಳಿದ್ದೇವೆ. ತಿದ್ದುಪಡಿಯನ್ನು ತರುತ್ತೇವೆಂದು ಹೇಳಿದರು. ಆದರೆ ತಿದ್ದುಪಡಿ ತರಲಿಲ್ಲ. ಹಾಗಾಗಿ ಇದು ಎಲ್ಲೋ ಏನೋ ಒಂದು ರೀತಿ ಹಾಜ್ ಪಾಜ್ ಆಗಿರತಕ್ಕಂಥ, ಯಾವುದೋ ಒಂದು ರಾಜಕೀಯ ಹಿನ್ನೆಲೆಯಿರುವ ಒಂದು ತೊಡಕನ್ನು ನಿವಾರಿಸಿಕೊಳ್ಳುವ ಉದ್ದೇಶದಿಂದ ಅವರು ತಂದಿರತಕ್ಕಂಥ ತಿದ್ದುಪಡಿಯನ್ನು ಸಮಗ್ರವಾಗಿ ನಾವು ವಿರೋಧಿಸುತ್ತೇವೆ. ದಯವಿಟ್ಟು ಈ ಬಿಲ್ ನ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಸಮಗ್ರವಾಗಿರತಕ್ಕಂಥ ತಿದ್ದುಪಡಿಯನ್ನು ತರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

3.50 ಪಿ.ಎಂ.

+ ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೆ, ಘಟನಾ ತಿದ್ದುಪಡಿಯ ಹಿನ್ನೆಲೆಯಲ್ಲಿ ಮೀಸಲಾತಿ ಕಾನೂನು ಬದ್ಧವಾಗಿ ಬಂದು, ಅಧಿಕಾರವನ್ನು ತಮ್ಮ ಹಕ್ಕಿನಿಂದ ಪಡೆದುಕೊಳ್ಳುವಂತಹ ಒಂದು ವ್ಯವಸ್ಥೆಯೂ ಇದ್ದಾಗ ಗ್ರಾಮಪಂಚಾಯ್ತಿಯ ಮಟ್ಟದಲ್ಲಿ ಈ ಅಧಿಕಾರ ಇದ್ದರೆ ನಮಗೆ ಇರಬೇಕು. ಇಲ್ಲ ಎಂದರೆ ಬೇರೆ ಅನುಭವಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬಾರದು ಎನ್ನುವಂತಹ ಮನೋಭಾವನೆಯನ್ನು ಹೊಂದಿರುವಂತಹ ಮಹಾನುಭಾವರ ಒಂದು ಬಹಿಷ್ಕಾರ ವಿಫಲವಾಗಬೇಕು ಎನ್ನುವ ದೃಷ್ಟಿಯಿಂದ ಅಮೆಂಡ್‌ಮೆಂಟ್‌ನ್ನು ತಂದಿದ್ದಾರೆ. ಅದು ಆ ಬಹಿಷ್ಕಾರವನ್ನು ವಿಫಲ ಮಾಡುವುದರಲ್ಲಿ ಯಶಸ್ವಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಆ

ಮೀಸಲಾತಿಯಿಂದ ಒಮ್ಮೆ ಅಧಿಕಾರಕ್ಕೆ ಬಂದಂತಹ ವ್ಯಕ್ತಿಗಳು, ಪಂಚಾಯ್ತಿಯಲ್ಲಿ ಅಧಿಕಾರವನ್ನು ನಡೆಸಬೇಕಾದರೆ, ಈ ಬಹಿಷ್ಕಾರವನ್ನು ಮಾಡಿದಂತಹ ಸದಸ್ಯರುಗಳು ಅವರಿಗೆ ಅಧಿಕಾರವನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿ ಕೊಡುತ್ತಾರೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಬೇಕು. ಯಾರು ತಮ್ಮನ್ನು ಬಿಟ್ಟು ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಳ್ಳಬಾರದು ಎಂದು ವಿಚಾರವನ್ನು ಮಾಡಿರುತ್ತಾರೆ. ಅವರು ಸುಸೂತ್ರವಾಗಿ ಅಧಿಕಾರವನ್ನು ನಡೆಸಲು ಅವಕಾಶವನ್ನು ಕಲ್ಪಿಸುವುದು. ಅಂತಹವರು ಪಂಚಾಯಿತಿಯ ಸದಸ್ಯರಾಗಿ ಮುಂದುವರೆಯಲಿಕ್ಕೆ ಅನರ್ಹರು ಎನ್ನುವಂತಹ ಅಭಿಪ್ರಾಯ ಬಂತು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ, ಯಾರು ಪಂಚಾಯಿತಿಯ ಚುನಾವಣೆಯು ಮುಗಿದ ಕೂಡಲೇ ಮೊದಲನೆಯದಾಗಿ ನಡೆಯುವ ಸಭೆಯಲ್ಲಿ ಪದಾಧಿಕಾರಿಗಳ ಆಯ್ಕೆಯ ಸಭೆಯನ್ನು ಬಹಿಷ್ಕಾರ ಮಾಡುವ ಮಟ್ಟಕ್ಕೆ ಹೋಗುತ್ತಾರೆ. ಅವರು ಪಂಚಾಯಿತಿಯ ಸದಸ್ಯರಾಗಿ ಮುಂದುವರೆಯುವುದು ಅರ್ಹರಲ್ಲ, ಘಟನೆಯ ಒಂದು ತಿದ್ದುಪಡಿಯ ಮುಖಾಂತರವಾಗಿ ಒಂದು ಸಾಮಾಜಿಕ ನ್ಯಾಯವನ್ನು ಏನು ತಂದು ಪಟ್ಟಭದ್ರ ಹಿತಾಸಕ್ತಿಗಳ ಈ ಅಧಿಕಾರದ ವ್ಯಾಮೋಹವನ್ನು ಅಲ್ಲಿಯವರೆಗೆ ವಂಚಿತರಾದವರ ವರ್ಗಕ್ಕೆ ಏನು ಕೊಡುತ್ತಿದ್ದೀರಿ ಅದಕ್ಕೆ ವಿರುದ್ಧವಾದಂತಹ ಜನರು ಪಂಚಾಯಿತಿಯ ಸದಸ್ಯರಾಗಿ ಮುಂದುವರೆಯುವಂಥ ಅವಕಾಶವನ್ನು ತಾವು ಕಲ್ಪಿಸಿಕೊಡಬಾರದು. ಅದಕ್ಕೆ ಸೂಕ್ತ ಬದಲಾವಣೆಯನ್ನು ತಂದು ಅವರ ಇಂಥ ಪ್ರಯತ್ನಗಳು ವಿಫಲವಾಗುವುದಕ್ಕೆ ತಮ್ಮ ಪ್ರಯತ್ನವಾಗಬೇಕೇ ಹೊರತಾಗಿ ಈ ಒಂದು ಕೋರಂ ಬಗ್ಗೆ ತಿದ್ದುಪಡಿಯನ್ನು ಮಾಡಿ ಮಾಡತಕ್ಕಂಥದ್ದು ಮಾತ್ರ ಅಷ್ಟು ಸರಿಯಾದಂತಹ ವ್ಯವಸ್ಥೆಯಲ್ಲವೆಂದು ತಮಗೆ ಹೇಳಿ, ಇನ್ನು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ಥಾನವನ್ನು 20 ತಿಂಗಳು ಮಾತ್ರವೆಂದು ತಾವು ಮೀಸಲು ಇಡುತ್ತಿದ್ದೀರಿ. ನನಗೆ ಒಂದು ಸಂತೋಷ ಏನೆಂದರೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಕಾಲವನ್ನು ತಾವು ಮೊಟಕುಗೊಳಿಸುತ್ತಿಲ್ಲ. ಅದಕ್ಕೆ ನಾವು ನಿಮಗೆ ಅಭಿನಂದನೆಗಳನ್ನು ಸಲ್ಲಿಸಲೇಬೇಕು. ಆದರೆ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಮೊಟಕುಗೊಳಿಸದಂತಹ ಅಧಿಕಾರವನ್ನು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಅಧಿಕಾರವನ್ನು ಮೊಟಕುಗೊಳಿಸುವುದಕ್ಕೆ ಹೋಗುತ್ತಿದ್ದೀರಲ್ಲಾ ಇದು ಜನರಿಗೆ ಏನು ಕಲ್ಪನೆಯನ್ನು ಕೊಡುತ್ತದೆ? ಶಾಸಕರಿಗೆ ಗ್ರಾಮೀಣ ಮಟ್ಟದಲ್ಲಿ ಒಂದು ಪರ್ಯಾಯ ನಾಯಕತ್ವ ಬೆಳೆಯುತ್ತಿದೆ. ಅದು ಬೆಳೆಯಬಾರದು ಎನ್ನುವಂತಹ ದೃಷ್ಟಿ ನಮ್ಮೆಲ್ಲಾ ಶಾಸಕರಿಗೆ ಇದೆ ಎನ್ನುವಂತಹ ಸಂದೇಹ ಹೊರಗೆ ಹೋಗುತ್ತದೆ. ದಯವಿಟ್ಟು ಅದನ್ನು ಮಾಡಬೇಡಿ. ಗ್ರಾಮ ಮಟ್ಟದಲ್ಲಿ ಒಪ್ಪಿಕೊಳ್ಳುವಂತಹ ಈ ಮೀಸಲಾತಿಯನ್ನು ಈ ಅಬಲ ವರ್ಗದವರಿಗೆ ಸಿಕ್ಕಂತಹ ಅವಕಾಶವನ್ನು ಸಂಪೂರ್ಣವಾಗಿ ಅವರಿಗೆ ಕೊಡಬೇಕು ಎನ್ನುವ ಮಾತನ್ನು ಒತ್ತಿ ಹೇಳುತ್ತೇನೆ. ಅದನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಒಪ್ಪಲಿಲ್ಲ ಎಂದರೆ ಅದರ ಅರ್ಥವೇನು? ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹೊರ ಹೊಮ್ಮುವಂತಹ ನಾಯಕತ್ವ ಮಾತ್ರ ಶಾಸಕರಿಗೆ ಪರ್ಯಾಯವಾಗಿ ನಿಲ್ಲಲಿಕ್ಕೆ ಸಾಧ್ಯವಾಗುತ್ತದೆಯೇ ಹೊರತಾಗಿ ಗ್ರಾಮ ಮಟ್ಟದಲ್ಲಿ ಹೊರ ಹೊಮ್ಮುವ ನಾಯಕತ್ವ ಶಾಸಕರಿಗೆ ಪರ್ಯಾಯವಾಗುವುದಿಲ್ಲ ಎನ್ನುವುದನ್ನು ತಿಳಿದುಕೊಂಡು ಅಲ್ಲಿ ಮಾತ್ರ ಅವರನ್ನು ಕತ್ತರಿಸುವಂತಹ ಈ ಪ್ರಯತ್ನ ಇದೆಯಲ್ಲಾ ನಿಮ್ಮ ವೈಚಾರಿಕ ಹಿನ್ನೆಲೆಗೆ ನಿಮಗೆ ಮಾನವಿಕವಾಗಿ ಹೊಂದುವಂತಹ ಅಮೆಂಡ್‌ಮೆಂಟ್ ಇದು ಅಲ್ಲ. ನೀವು ಏನೋ ನಿಮ್ಮ ಶಾಸಕಾಂಗ ಪಕ್ಷದಲ್ಲಿರುವಂತಹ . ಸದಸ್ಯರ ಒತ್ತಾಯಕ್ಕೆ ಮಣಿದು ಇದನ್ನು ನಿಮ್ಮ ಮನಸ್ಸಿಗೆ ವಿರೋಧವಾಗಿ ಈ ಅಮೆಂಡ್‌ಮೆಂಟನ್ನು ತರುತ್ತಿದ್ದೀರಿ.

ದಯವಿಟ್ಟು ಇದನ್ನು ವಿಚಾರ ಮಾಡಿ. ಇವತ್ತು ಈ ಅಮೆಂಡ್‌ಮೆಂಟನ್ನು ಪಾಸ್ ಮಾಡುವ ಗೋಜಿಗೆ ಹೋಗಬೇಡಿ. ನಾಳೆ 26ನೇ ತಾರೀಖಿನವರೆಗೆ ಸಮಯವನ್ನು ಇಟ್ಟುಕೊಳ್ಳಿ. ಇನ್ನೊಮ್ಮೆ ನಿಮ್ಮ ಪಕ್ಷದ ವೇದಿಕೆಯಲ್ಲಿ ವಿಚಾರ ಮಾಡಿ ನೋಡಿ. ಇಲ್ಲ ಎಂದರೆ, ನಿಮಗೂ ಈ ಸಾಮಾಜಿಕ ನ್ಯಾಯವನ್ನು ತರಬೇಕೆಂದು ಏನು ಕಲ್ಪನೆ ಇದೆ. ಅದಕ್ಕೆ ಒಂದು ಕೊಡಲಿ ಪೆಟ್ಟು ಆಗುತ್ತದೆ. ಮುಂದೆ ನಿಮ್ಮ ರಾಜಕೀಯ ಸ್ಥಾನಮಾನಕ್ಕೂ ಕೊಡಲಿಪೆಟ್ಟು ಆಗುವುದರಲ್ಲಿ ಯಾವುದೇ ಸಂಶಯವಿಲ್ಲ ಎನ್ನುವಂತಹ ಎಚ್ಚರಿಕೆಯನ್ನು ತಮಗೆ ಕೊಟ್ಟು ಈ ಎರಡು ಅಮೆಂಡ್‌ಮೆಂಟನ್ನು ವಿರೋಧಿಸುತ್ತಿದ್ದೇನೆ. ಇವತ್ತು ಎರಡು ಅಮೆಂಡ್‌ಮೆಂಟನ್ನು ಪಾಸ್ ಮಾಡುವುದಕ್ಕೆ ದಯಮಾಡಿ ಹೋಗಬೇಡಿ. ಎಂಬ ಸಲಹೆಯನ್ನು ಕೊಡುತ್ತೇನೆ. ದಯಮಾಡಿ ಇದನ್ನು ಮುಂದೆ ಹಾಕಿದರೆ ಒಳ್ಳೆಯದೆಂದು ಹೇಳಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಕೆ. ಕುಮಾರ ಸ್ವಾಮಿ (ಬೇಲೂರು) : ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಏನು ಈ ಮಸೂದೆಯನ್ನು ತಿದ್ದುಪಡಿಗಾಗಿ ತಂದಿದೆ ಅದನ್ನು ಬೆಂಬಲಿಸಿ ಎರಡು ಮಾತುಗಳನ್ನು ಆಡುತ್ತೇನೆ. ನಮ್ಮ ವಿರೋಧಿ ಪಕ್ಷದ ಸದಸ್ಯರುಗಳಾದ ಬಿ.ಜೆ.ಪಿ. ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಬಹುಶಃ ವಿರೋಧವನ್ನು ಮಾಡಬೇಕು ಎನ್ನುವ ಕಾರಣದಿಂದಲೇ ವಿರೋಧವನ್ನು ಮಾಡಿದ್ದಾರೆಂದು ನಾನು ಭಾವಿಸುತ್ತೇನೆ.

(ಈ ಹಂತದಲ್ಲಿ ಅಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಪಂಚಾಯತ್ ರಾಜ್ ಮತ್ತು ಜಿಲ್ಲಾ ಪಂಚಾಯಿತಿಯ ಮೂಲ ಕಲ್ಪನೆಯನ್ನೇ ಮರೆತಿದ್ದಾರೆಂದು ನಾನು ಭಾವಿಸುತ್ತೇನೆ. ಇದು ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಗೆ ಅವಧಿಯನ್ನು ನಿಗಧಿಯನ್ನು ಮಾಡಿರತಕ್ಕಂಥದ್ದರ ಮೂಲ ಉದ್ದೇಶ ಅಧಿಕಾರ ವಿಕೇಂದ್ರೀಕರಣ ಮತ್ತು ಸಾಮಾಜಿಕ ನ್ಯಾಯ ಸಿಗಬೇಕು ಎಂಬುದೇ ಆಗಿದೆ. ಈಗ ನಾವು ಅನೇಕ ವರ್ಗಗಳನ್ನು ಮೀಸಲಾತಿಯ ದೃಷ್ಟಿಯಿಂದ ಸೃಷ್ಟಿ ಮಾಡಿದ್ದೇವೆ. ಪರಿಶಿಷ್ಟ ಜಾತಿಯವರಿಗೆ, ವರ್ಗದವರಿಗೆ, ಬಿ.ಸಿ.ಎಂ. ಎ ಮತ್ತು ಬಿ.ಸಿ.ಎಂ. ಬಿ ಸಾಮಾನ್ಯ ವರ್ಗ ಹೀಗೆ ಪ್ರತಿ ವರ್ಗದವರಿಗೂ ಕೂಡ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಅಧಿಕಾರ ಸಿಗಬೇಕು ಮತ್ತು ಪ್ರತಿ ತಾಲ್ಲೂಕಿನಲ್ಲಿಯೂ ಸಹ ಸಿಗಬೇಕು. ಈಗ ನೀವು ಒಂದು ಜಿಲ್ಲೆಯಲ್ಲಿ ಮೀಸಲಾತಿಯನ್ನು ಇಟ್ಟರೆ ಸಾಮಾನ್ಯ ವರ್ಗದವರೂ 5 ವರ್ಷಗಳ ಕಾಲ ಇರುತ್ತಾರೆ. ಪರಿಶಿಷ್ಟ ಜಾತಿಯವರೇ 5 ವರ್ಷ ಇರುತ್ತಾರೆ. ಬಿ.ಸಿ.ಎಂ. ಎ ಯಾವುದೇ ಒಂದು ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ವರ್ಗದವರೇ 5 ವರ್ಷಗಳು ಇರುತ್ತಾರೆ. ಆದರೆ ಅಧಿಕಾರ ವಿಕೇಂದ್ರೀಕರಣ ಸಾಮಾನ್ಯವಾಗಿ ಸಾಮಾಜಿಕವಾಗಿ ಹಿಂದುಳಿದಿರತಕ್ಕಂಥವರು, ಸಾಮಾಜಿಕವಾಗಿ ಶೋಷಿತರಾಗಿರುವವರಿಗೂ ಕೂಡ ದೊರಕಲಿ ಎನ್ನುವ ಉದ್ದೇಶದಿಂದ ಈ ಅವಧಿಯನ್ನು 20 ತಿಂಗುಳುಗಳಿಗೆ ಇಟ್ಟಿದ್ದಾರೆ ಬೇರೆ ಏನೂ ಅಲ್ಲ ಎಂದು ನಾನು ಭಾವಿಸಿದ್ದೇನೆ. ಹಾಗಾಗಿ ಈ ಮಸೂದೆ ಏನಿದೆ ಅದು ಅಧಿಕಾರ ವಿಕೇಂದ್ರೀಕರಣ ಮತ್ತು ಸಾಮಾಜಿಕ ದೃಷ್ಟಿಯಿಂದ ಸರಿ ಇದೆ. ಆದ್ದರಿಂದ ಇದನ್ನು ಸರ್ಕಾರ ತಂದಿರತಕ್ಕಂಥದ್ದನ್ನು ಬೆಂಬಲಿಸಿ ಅದನ್ನು ಎಲ್ಲರೂ ಸಹ ಆ ಮಸೂದೆಯನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಂಚಾಯತ್ ರಾಜ್, ಈ ತಿದ್ದುಪಡಿಯನ್ನು ತರತಕ್ಕಂತಹ ಸಂದರ್ಭದಲ್ಲಿ ನಾವು ಏನು ತಿಳಿದುಕೊಂಡಿದ್ದೇವೆ ಎಂದರೆ ಸನ್ಮಾನ್ಯ ಸಚಿವರು ಸಮಗ್ರವಾದಂತಹ ತಿದ್ದುಪಡಿಯನ್ನು ತಂದು ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ತಂದು ಕೊಡುತ್ತಾರೆನ್ನುವ ಭಾವನೆ ಇತ್ತು. ಆದರೆ ತುರ್ತಾಗಿ ಕೆಲವೇ ವಿಚಾರಗಳ ಬಗ್ಗೆ ಈ ತಿದ್ದುಪಡಿಯನ್ನು ತಂದು ಉಳಿದಂತಹ ಸಮಸ್ಯೆಗಳನ್ನು ಹಾಗೆಯೇ ಜೀವಂತವಾಗಿಡುವಂತಹ ಪ್ರಶ್ನೆಯು ಬರುತ್ತದೆ. ಬಹುಶಃ ತಾವು ಯಾವ ರೀತಿಯಾದಂತಹ ತಿದ್ದುಪಡಿಯನ್ನು ತರುತ್ತೀರಿ ಎಂದು ನನಗೆ ಗೊತ್ತಿಲ್ಲ. ಆದಕ್ಕೆ ತಾವು ಈ ವಿಚಾರವನ್ನು ಬಿಟ್ಟು ಮಾತನಾಡಿ ಎಂದು ಸ್ಪಷ್ಟವಾಗಿ ಹೇಳಿದ್ದೀರಿ. ಯಾವ ತಿದ್ದುಪಡಿಯನ್ನು ತಂದಿದ್ದೀರಿ ಅದಕ್ಕೆ ಸೀಮಿತವಾಗಿ ಮಾತನಾಡಿ ಎಂದು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದೀರಿ. ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ 138ನೇ ಪ್ರಕರಣಕ್ಕೆ ತಿದ್ದುಪಡಿಯನ್ನು ತರತಕ್ಕಂತಹ ಸಂದರ್ಭದಲ್ಲಿ ಮೀಸಲಾತಿಯ ಬಗ್ಗೆ ತಾವು ಏನನ್ನು ಹೇಳಿದ್ದೀರಿ ಎಂದರೆ, ಬಹುಶಃ 20 ತಿಂಗಳಿಗೆ ಬದಲಾವಣೆಯಾಗತಕ್ಕಂತಹ ಸಂದರ್ಭದಲ್ಲಿ ಮೀಸಲಾತಿಯನ್ನು ನಿಗದಿ ಮಾಡಿ ಬದಲಾವಣೆಯನ್ನು ಮಾಡಬೇಕು. ಇಲ್ಲದಿದ್ದರೆ ಈ ಸಮಸ್ಯೆಯ ಬಗ್ಗೆ ವಿಮರ್ಶೆ ಮಾಡಿದರೆ ಅಥವಾ ಇದರ ಬಗ್ಗೆ ತಿಳಿದುಕೊಂಡರೆ, ಒಬ್ಬರಿಗೆ 20 ತಿಂಗಳುಗಳ ಕಾಲವಕಾಶವನ್ನು ಕೊಡುತ್ತೀರಿ. 15 ತಿಂಗಳುಗಳ ನಂತರ ಅವರು ರಾಜೀನಾಮೆಯನ್ನು ಕೊಡುತ್ತಾರೆ. ಮತ್ತೆ ಒಬ್ಬ ಸಾಮಾನ್ಯ ಮೀಸಲಾತಿಯವನು ಬರುವುದಕ್ಕೆ ಅವಕಾಶವಾಗುತ್ತದೆ. ಅವನಿಗೆ ಮತ್ತೆ 20 ತಿಂಗಳು ಅವಕಾಶ ಸಿಗುತ್ತದೆ. ತಾವು ಕೊಟ್ಟಂಥ ಮಾಹಿತಿಯನ್ನೇ ತೆಗೆದುಕೊಳ್ಳಿ, ಸನ್ಮಾನ್ಯ ಅಧ್ಯಕ್ಷರೆ, ಚುನಾಯಿತ ದಿನಾಂಕದಿಂದ 20 ತಿಂಗಳು ಅಥವಾ ಅವನು ತಾಲ್ಲೂಕು ಪಂಚಾಯ್ತಿಯ ಸದಸ್ಯನಾಗಿರುವವರೆಗೆ ಎಂದು ಹೇಳಿದೆ, ಅಂದರೆ ಇದರಲ್ಲಿ ಸ್ಪಷ್ಟವಾಗಿ ಅವನು ಯಾವ ದಿನಾಂಕದಿಂದ ಚುನಾಯಿತನಾಗಿರುತ್ತಾನೆ ಅಲ್ಲಿಂದ 20 ತಿಂಗಳು ಎನ್ನುವಂತಹ ಭಾವನೆಯು ಬರುತ್ತದೆ. 15ನೇ ತಿಂಗಳು ನಡೆದ ನಂತರ ಅಥವಾ 18ನೇ ತಿಂಗಳು ಅಧಿಕಾರವನ್ನು ಮುಗಿಸಿದ ನಂತರ ಅವನು ರಾಜೀನಾಮೆಯನ್ನು ಕೊಟ್ಟರೆ ಮತ್ತೊಬ್ಬ ಸದಸ್ಯನು ಚುನಾಯಿತನಾದರೆ ಅವನಿಗೂ ಸಹ ತಾವು ಆಲೋಚನೆಯನ್ನು ಮಾಡಬೇಕು. ಮತ್ತೊಂದು ವಿಚಾರವೆಂದರೆ ಈ ಮೀಸಲಾತಿಯ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕು. ಮತ್ತೊಂದು ವಿಚಾರವೇಂದರೆ ಈ ಮೀಸಲಾತಿಯ ಬಗ್ಗೆ ತಾವು ಏನು ಚುನಾವಣೆಯನ್ನು ಘೋಷಣೆ ಮಾಡುತ್ತೀರಿ, ಆ ಚುನಾವಣೆಯನ್ನು ಘೋಷಣೆ ಮಾಡುವ ಪೂರ್ವ ಯಾವ್ಯಾವುದಕ್ಕೆ ಮೀಸಲಾತಿಯನ್ನು ಕೊಡುತ್ತೀರಿ ಎಂಬುದನ್ನೂ ಸಹ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಚುನಾವಣೆಯನ್ನು ಘೋಷಣೆ ಮಾಡುವ ಸಂದರ್ಭದಲ್ಲಿ ಈ ಮೀಸಲಾತಿಗಳು ರಾಜಕೀಯ ಮೀಸಲಾತಿಗಳಾಗಬಾರದು ಎನ್ನತಕ್ಕಂತಹ ವಿಚಾರವನ್ನು ಹೇಳುತ್ತೇನೆ.

+ ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ 53ನೇ ಪ್ರಕರಣಕ್ಕೆ ನಾವು ತಿದ್ದುಪಡಿಯನ್ನು ತರುತ್ತಿರುವಂಥ ಸಂದರ್ಭದಲ್ಲಿ ಅನೇಕ ವಿಷಯಗಳು, ಚರ್ಚೆಯಲ್ಲಿ ಪ್ರಸ್ತಾಪವಾಗಿವೆ. ಮೂಲಭೂತವಾಗಿ ತಾವು ಕೊಟ್ಟಿರತಕ್ಕ ಅಭಿಪ್ರಾಯ ಅನೇಕ ಸಂದರ್ಭದಲ್ಲಿ ಮೀಸಲಾತಿಯನ್ನು ಕೊಟ್ಟಿರತಕ್ಕದ್ದನ್ನು ವಿಫಲಗೊಳಿಸುವಂಥ ಕಾರ್ಯಕ್ರಮದ ಮೂಲಕ ಉಪಾಧ್ಯಕ್ಷರನ್ನು ಆಯ್ಕೆ ಮಾಡಿ ಅಂದರೆ ಮುಂದೆ ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಗಳಲ್ಲಿ ಕೋರಂ ಇಲ್ಲದಂತೆ ಮಾಡಿ, ಉಪಾಧ್ಯಕ್ಷನೇ ತನ್ನ ಕೆಲಸವನ್ನು ನಿರ್ವಹಿಸಿಕೊಂಡು ಹೋಗುವಂಥ ಒಂದು ವ್ಯವಸ್ಥೆ ಇದೆ. ಆ ವ್ಯವಸ್ಥೆಯ ಮೂಲಕ ಕೆಲವು ತಾಲ್ಲೂಕುಗಳಲ್ಲಿ ಆದಂಥ ನಿರ್ದಿಷ್ಟ

ಪ್ರಕರಣಗಳನ್ನು ಅದರಲ್ಲೂ ಕನಕಪುರ ತಾಲ್ಲೂಕಿನ ಒಂದು ಪ್ರಕರಣವನ್ನು ಶಾಸಕ ಮಿತ್ರರಾದ ಮಾನ್ಯ ಶಿವಕುಮಾರ್‌ರವರು ಅನೇಕ ಸಂದರ್ಭಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ,. ಆ ಸಂದರ್ಭದಲ್ಲಿ ನಮ್ಮ ಸರ್ಕಾರ ನಾವು ಮಾಡಿದಂಥ ಮೀಸಲಾತಿಯ ಉಪ ಕ್ರಮಗಳನ್ನು ಬೇರೆ ಬೇರೆ ಮಾರ್ಗಗಳಿಂದ ವಿಫಲಗೊಳಿಸಬಾರದೆಂಬ ಸದುದ್ದೇಶದಿಂದ ನಾವು ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಅದನ್ನು ಅನ್ಯ ಮಾರ್ಗಗಳಿಂದ ವಿಫಲಗೊಳಿಸುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬಾರದು. ಇದಕ್ಕೆ ನಿರ್ದಿಷ್ಟವಾಗಿ ಕನಕಪುರ ಕ್ಷೇತ್ರದ ಒಂದು ಗ್ರಾಮದಲ್ಲಿ ನಡೆದಂಥ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾವು ಈಗಾಗಲೇ ಒಂದು ಸಮಜಾಯಿಷಿ ನೋಟೀಸನ್ನು ಕೂಡ ಕೊಟ್ಟಿದ್ದೇವೆ. ನೀವು ನಿಮ್ಮ ಕರ್ತವ್ಯವನ್ನು ನಿಭಾಯಿಸುವುದರಲ್ಲಿ ವಿಫಲವಾಗಿರುವುದರಿಂದ ಅಂದರೆ 3ನೇ ಸಾರಿ ಕೋರಂ ಆಗುವುದಕ್ಕೂ ಹಾಜರಾಗದಿರುವುದರಿಂದ ಈ ನಿಮ್ಮ ಗ್ರಾಮ ಪಂಚಾಯಿತಿಯನ್ನು ಏತಕ್ಕೆ ವಜಾ ಮಾಡಬಾರದು ಎನ್ನುವಂಥ ಸಮಜಾಯಿಷಿ ನೋಟೀಸನ್ನು ಕೊಟ್ಟಿದ್ದೇವೆ. ಈ ರೀತಿ ಪ್ರತಿಯೊಂದು ಪ್ರಕರಣಕ್ಕೂ ಸಂಬಂಧಪಟ್ಟಂತೆ ಸಮಜಾಯಿಷಿ ನೋಟೀಸನ್ನು ಕೊಡತಕ್ಕದ್ದು, ಮತ್ತು ಆ ಗ್ರಾಮ ಪಂಚಾಯಿತಿಯನ್ನು ವಜಾ ಮಾಡತಕ್ಕ ಕ್ರಮದಿಂದ ಈ ಕೆಲಸ ಸಾಧ್ಯವಾಗುವುದಿಲ್ಲ ಎಂಬ ಕಾರಣದಿಂದ ನಾವು ಇವತ್ತು ಈ ತಿದ್ದುಪಡಿಯನ್ನು ತಂದು ನಮ್ಮ ಸಹಕಾರ ಇಲಾಖೆಯ ಕಾನೂನಿನಲ್ಲಿರುವಂಥ ರೀತಿಯಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ಚುನಾವಣೆಗೆ ಸಂಬಂಧಿಸಿದಂತೆ ಕೋರಂ ಇರಲೇಬೇಕೆಂಬ ಮಾತು ಇದರಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ನಿಯಮ 53ರಲ್ಲಿ ಹೀಗಿದೆ.

" .... and if within such period there is no quorum the presiding authority shall adjourn the meeting to such time on the following day or such future day as he may fix."

ಎಂದು ಇರುವುದರಿಂದ ಮತ್ತು ಇದನ್ನು ದುರುಪಯೋಗಪಡಿಸಿಕೊಳ್ಳುವಂಥ ಸಾಧ್ಯತೆಯೂ ಕೂಡ ಇರುವುದರಿಂದ ಆ ರೀತಿಯಾಗಿ ಮುಂದುವರೆಸಲ್ಪಟ್ಟಿರುವ ಸಭೆಗೆ ಕೋರಂ ಇಲ್ಲದಿದ್ದರೂ ಕೂಡ, ಅಂದರೆ ಅವರು ಒಬ್ಬರ ಇದ್ದರೂ ಕೂಡ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡಬಹುದು ಎಂಬುದೇ ಈ enabling Provision ಇದರಲ್ಲಿ ನಾವು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಪ್ರಯತ್ನವನ್ನು ಮಾಡಿದ್ದೇವೆ. ಈ ಸದನದ ಎಲ್ಲಾ ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆ ಅದನ್ನು ಈ ತಿದ್ದುಪಡಿಯ ರೂಪದಲ್ಲಿ ತಂದು ನಮ್ಮ ಪ್ರತಿಜ್ಞನಿಯನ್ನು ಕೊಟ್ಟಿದ್ದೇವೆಯೇ ಹೊರತು ನಾವೇ ಇದನ್ನು ಸ್ವತಃ ಮಾಡಿರತಕ್ಕದ್ದಲ್ಲ. ಮಾನ್ಯ ಖರ್ಗೆಯವರು ಮಾತನಾಡುತ್ತಾ ಮೊದಲನೇ ಸಭೆಗೆ ಕೋರಂಗೆ ಬೇಕಾದಂಥ ಜನರು ಅಕಸ್ಮಾತ್ ಗೈರುಹಾಜರಾದರೆ ಅವರಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದೆಂದು ಹೇಳಿದರು. ಗೈರು ಹಾಜರಾಗುವಂಥಾದ್ದು ಕೂಡ ಆತನ ಒಂದು ಹಕ್ಕಾಗಿರುತ್ತದೆ. ಅನೇಕ ಸಂದರ್ಭದಲ್ಲಿ ಚುನಾಯಿತರಾದವರೂ ಕೂಡ ಅದರ ಮಾರನೇ ದಿವಸವೇ ತಮ್ಮ ರಾಜೀನಾಮೆಯನ್ನು ' ಕೊಟ್ಟಿರುವಂಥ ಉದಾಹರಣೆಗಳಿವೆ. ಯಾವುದೇ ಸಭೆಗೂ ಬರದೇ ಇರುವಂಥ ಪ್ರಕರಣಗಳೂ ಇವೆ. ಒಬ್ಬ ವ್ಯಕ್ತಿ ಸಭೆಗೆ ಬಂದೇ ತೀರಬೇಕೆಂದು ಕಡ್ಡಾಯ ಮಾಡುವುದಕ್ಕಾಗುವುದಿಲ್ಲ. ಈ ಮೀಸಲಾತಿ ವಿಷಯದಲ್ಲಿ ವಿಫಲವಾಗಬಾರದೆಂಬ ಕಾರಣದಿಂದ ಇದನ್ನು ತಂದಿದ್ದೇವೆ ಮಾನ್ಯ ಸದಸ್ಯರಾದ ರಾಮಕೃಷ್ಣರವರಂಥವರೂ ಈ ವಿಚಾರದಲ್ಲಿ ಸದ್ಭಾವನೆಯನ್ನು ಇಟ್ಟುಕೊಂಡಿರುವಂಥವರು ಇದನ್ನು ವಿರೋಧಿಸಬಾರದಿತ್ತು. ಆದರೂ ಈಗ ನಾವು ಇದಕ್ಕೆ ಸ್ಪಷ್ಟೀಕರಣವನ್ನು ಕೊಟ್ಟಿದ್ದೇವೆ. ಈ ಸದ್ದುದ್ದೇಶದಿಂದ

ನಾವು ತಂದಿರತಕ್ಕ ಈ ತಿದ್ದುಪಡಿಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯವನ್ನೂ ವ್ಯಕ್ತಮಾಡಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೇ ಗೊತ್ತುವಳಿ ಆಗಿರತಕ್ಕದ್ದು ಎಂದರೆ, 20 ತಿಂಗಳ ಅವಧಿಗೆ ಇವರ ಅಧಿಕಾರಾವಧಿಯನ್ನು ಇಳಿಸಿರತಕ್ಕದ್ದು ಸರಿಯಲ್ಲ ಎಂಬುದು. ಈ ವಿಚಾರದಲ್ಲಿ ಬಹಳ ಜನರಿಗೆ ಸಾಕಷ್ಟು ಆತಂಕಗಳಿವೆ. ಈ ಮೀಸಲಾತಿಯ ಕ್ರಮದಲ್ಲಿ ಬೇರೆ ಬೇರೆಯವರಿಗೆ ಮೀಸಲಾತಿ ಹೊರಟುಹೋಗುತ್ತದೆ ಎಂಬುದು. ನಮ್ಮ ಶಾಸಕ ಮಿತ್ರರು, ನಮ್ಮ ಶಾಸಕಾಂಗ ಪಕ್ಷದಲ್ಲಿ ಅಥವಾ ಹೊರಗಡೆಯ ಒತ್ತಡದಿಂದ ಇದನ್ನು ತಂದಿದ್ದೀರಿ ಎನ್ನತಕ್ಕ ಮಾತನ್ನು ಹೇಳಿದರು. ಮಾನ್ಯ ಕಾಗೋಡು ತಿಮ್ಮಪ್ಪನವರು ಮೊನ್ನೆ ಬಹಳ ಒಳ್ಳೆಯ ವಿಚಾರಗಳನ್ನು ಇಲ್ಲಿ ಪ್ರಸ್ತಾಪಮಾಡಿದ್ದಾರೆ. ಅದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಆದರೆ ಬೇರೆ ಬೇರೆ ಕಾನೂನುಗಳಲ್ಲಿ ಬೇರೆ ಬೇರೆ ಆಗಿರುವಂಥ ಅಧಿಕಾರದ ಅವಧಿಯನ್ನೂ ಕೊಟ್ಟಿರುವಂಥಾದ್ದು ಇದೆ. ಇವತ್ತು ಸುಮಾರು 40-45 ಲಕ್ಷ ಜನಸಂಖ್ಯೆ ಇರುವಂಥ ಎಲ್ಲಾ ಮಹಾ ನಗರಪಾಲಿಕೆಗಳಲ್ಲೂ ಕೂಡ ಮೇಯರ್‌ರವರ ಅವಧಿಯನ್ನು ಕೇವಲ ಒಂದು ವರ್ಷಕ್ಕೆ ಸೀಮಿತಗೊಳಿಸಿದೆ. ಇಲ್ಲಿ ಯಾವ ತರ್ಕವನ್ನು ಅಳವಡಿಸಿಕೊಂಡಿದ್ದಾರೆಂಬ ವಿಚಾರವಿಲ್ಲ. ಇಲ್ಲಿ ತರ್ಕದ ಪ್ರಶ್ನೆ ಅಲ್ಲ. ಅಲ್ಲಿ ಬಂದಿರತಕ್ಕದ್ದು ಏನೆಂದರೆ ಇಂಥ ಮಹಾ ನಗರಪಾಲಿಕೆಗಳನ್ನು ಮಾಡುವಾಗ ಅದು ತನ್ನದೇ ಆದ ಸಮಷ್ಠಿ ವಿವೇಕದ ಮೂಲಕ ಒಂದು ವರ್ಷದ ಅವಧಿಗೆ ಮಹಾ ಪೌರರ ಅಧಿಕಾರವನ್ನು ನಿಗದಿ ಮಾಡಿದ್ದಾರೆ. ಅದೇರೀತಿ ತಾವು ಮಂತ್ರಿಗಳಾಗಿದ್ದಾಗ ಮಹಾ ನಗರಪಾಲಿಕೆಗಳಿಗೆ ಸಂಬಂಧಪಟ್ಟಿದ್ದಲ್ಲದೆ 74ನೇ ತಿದ್ದುಪಡಿಗೆ ಸಂಬಂಧಿಸಿದಂತೆ ನಮ್ಮ ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಇತ್ಯಾದಿಗಳಿಗೆ ತಿದ್ದುಪಡಿಯನ್ನು ತಂದಂಥ ಸಂದರ್ಭದಲ್ಲಿ ಅದರ ಅವಧಿಯನ್ನು ತಾವು 30 ತಿಂಗಳಿಗೆ ಎಂದು ಕಾಣಿಸಿದ್ದೀರಿ. ಈಗತಾನೇ ತಾವು ಹೇಳಿದಿರಿ, ಈ ಕಾನೂನಿನಲ್ಲಿ ಮೊದಲು 4 ವರ್ಷಗಳ ಕಾಲಾವಧಿ ಸದಸ್ಯರಿಗೆ ಇತ್ತು, ಬೇರೆ ಎಲ್ಲಾ ಪಂಚಾಯಿತಿ ಕಾನೂನುಗಳಲ್ಲೂ 5 ವರ್ಷಗಳ ಅವಧಿ ಇರುವುದರಿಂದ ಅದಕ್ಕೆ ಸಮಾನವಾಗಿರುವಂತೆ ತಿದ್ದುಪಡಿಯನ್ನು ತರುವುದರ ಮೂಲಕ ಅವರ ಅವಧಿಯನ್ನೂ ಕೂಡ 5 ವರ್ಷಗಳಿಗೆ ಹೆಚ್ಚಿಸಿರುವ ಸಂದರ್ಭದಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಅವಧಿಯನ್ನು ತಾವು ಏತಕ್ಕೆ ಕಡಿಮೆ ಮಾಡಿದ್ದೀರಿ ಎನ್ನುವಾಗ 73ನೇ ತಿದ್ದುಪಡಿಯನ್ನು ತಂದು ಕರ್ನಾಟಕ ಪಂಚಾಯಿತ್‌ರಾಜ್ ಕಾನೂನನ್ನು ತಾವು ತಂದಂಥ ಸಂದರ್ಭದಲ್ಲೇ ನಗರಪಾಲಿಕೆಗೆ ಇರತಕ್ಕ 74ನೇ ತಿದ್ದುಪಡಿಯನ್ನೂ ಕೂಡ ತಂದಿದ್ದೀರಿ. ಈ ಕಾನೂನಿನಲ್ಲಿ ತಾವು 5 ವರ್ಷದ ಅವಧಿಯನ್ನು ಕೊಟ್ಟು "...as that of the tenure of the members." ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಆದರೆ ಪುರಸಭೆ ಮತ್ತು ನಗರ ಸಭೆಗಳಿಗೆ ಸಂಬಂಧಪಟ್ಟಂತೆ 30 ತಿಂಗಳು ಅವಧಿ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾವು ತಜ್ಞರ ಒಂದು ಸಮಿತಿಯನ್ನು ನೇಮಕ ಮಾಡಿದ್ದೆವು ಮಾನ್ಯ ನಾಯಕ್‌ರವರ ಸಮಿತಿಯವರು ಸ್ಥೂಲವಾಗಿ ಕೊಟ್ಟಿರತಕ್ಕ ಒಂದು ಅಭಿಪ್ರಾಯದ ಮಾತನ್ನು ಇಲ್ಲಿ ಹೇಳುವುದಾದರೆ, ಅವರು 3 ವರ್ಷದ ಅಜೂಬಾಜಿನಲ್ಲಿ ಇದನ್ನು ಇಡಬಹುದೆಂಬ ಶಿಫಾರಸನ್ನೂ ಮಾಡಿದ್ದಾರೆ. ಇಲ್ಲಿ ಬಂದಿರತಕ್ಕ ಪ್ರಶ್ನೆಯಾದರೂ ಇಷ್ಟೆ. ಯಾವುದೋ ಒತ್ತಡಕ್ಕಾಗಿ ಮಣಿದು ಮಾಡಿರತಕ್ಕದ್ದಲ್ಲ, ಸಾಮಾಜಿಕ ನ್ಯಾಯವನ್ನು ಮಾನ್ಯ ಕುಮಾರ ಸ್ವಾಮಿಯವರು ಪ್ರತಿಪಾದನೆ ಮಾಡಿದಂತೆ ಎಲ್ಲಾ ವರ್ಗಕ್ಕೂ ಎಲ್ಲಾ ಜಿಲ್ಲೆಗೂ ಅಂದರೆ ಇಡೀ 20 ಜಿಲ್ಲೆಗಳಲ್ಲೂ ಅಂದರೆ 175 ತಾಲ್ಲೂಕುಗಳಲ್ಲೂ ಎಲ್ಲಾ ನಮೂನೆಯ ಪ್ರಾತಿನಿಧಿಕ ಸ್ವರೂಪ ಇರತಕ್ಕ ಜಾತಿ ಮತ್ತು ಜನರು ಈ ಅವಕಾಶದಿಂದ

ವಂಚಿತರಾಗಬಾರದು ಎಂದು ಪರ್ಯಾಯವಾಗಿ ಬೇರೆ ಬೇರೆ ಕಡೆಗೆ, ಬೇರೆ ಬೇರೆ ಜಿಲ್ಲೆಗಳಿಗೆ, ತಾಲ್ಲೂಕುಗಳಿಗೆ ರೊಟೇಷನ್ ಪ್ರಕಾರ ಅನ್ವಯಿಸುತ್ತೇವೆಯೇ ಹೊರತು, ಇರತಕ್ಕ ಕಾನೂನಿನಲ್ಲಿ ಈ ವರ್ಷ ಇಲ್ಲಿ ಸಾಮಾನ್ಯ ಕ್ಷೇತ್ರವಾಗಿರತಕ್ಕದ್ದು ಹಿಂದುಳಿದ ಜಾತಿಗೆ ಮೀಸಲಾದ ಕ್ಷೇತ್ರವಾಗಿರಬಹುದು. ಅಥವಾ ಹಿಂದುಳಿದ ಜಾತಿಗೆ ಮೀಸಲಾದ ಕ್ಷೇತ್ರ ಮತ್ತು ಮಹಿಳೆಗೆ ಮೀಸಲಾದ ಕ್ಷೇತ್ರವೂ ಆಗಬಹುದು. ಈರೀತಿ 20 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅಂದರೆ 20 ತಿಂಗಳಲ್ಲಿ 3 ಜನರಿಗೆ ಅವಕಾಶವನ್ನು ಕೊಡುವುದರಿಂದ ಎಲ್ಲಾ ಜಿಲ್ಲೆಗಳಲ್ಲಿರತಕ್ಕ ಆಯಾ ವರ್ಗದ ಜನರಿಗೆ ಅವರು ಅಧಿಕಾರವನ್ನು ನಿಭಾಯಿಸುವಂಥ ಅದರ ಮೂಲಕ ಅವರಿಗೆ ಅಧಿಕಾರದ ನಾಯಕತ್ವವನ್ನು ಕೊಡುವಂಥ ಕೆಲಸವಾಗುತ್ತದೆ. ತಾವು ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದಿರಿ. ಹೆಚ್ಚು ಅವಕಾಶವನ್ನು ಕೊಡುವುದರ ಮುಲಕ ಕೆಳಮಟ್ಟದಲ್ಲಿರತಕ್ಕ ನಾಯಕತ್ವವನ್ನು ಬೆಳಿಸುವುದಕ್ಕೆ ಸಾಧ್ಯವಾಗಬಹುದೆನ್ನುವುದು, ಇದು ನಿಜವಾಗಿಯೂ ಸ್ವಾಗತಾರ್ಹವಾದ ಮಾತು. ಆದರೆ ಈ ನಾಯಕತ್ವ ಎಲ್ಲಾ ಜನಾಂಗದಲ್ಲೂ ಏಕ ಕಾಲದಲ್ಲಿ ಮೂಡಬೇಕೆಂಬ ಕಾರಣದಿಂದ ನಾವು ಬೇರೆ ಬೇರೆ ಜಿಲ್ಲೆಗಳಲ್ಲಿ ಮತ್ತು ಬೇರೆ ಬೇರೆ ತಾಲ್ಲೂಕುಗಳಲ್ಲಿ ಆಯಾ ವರ್ಗಕ್ಕಿರುವ ಅಧಿಕಾರವನ್ನು 20 ತಿಂಗಳಿಗೆ ಸೀಮಿತಗೊಳಿಸುತ್ತೇವೆಂಬ ಉದ್ದೇಶವೇ ಹೊರತು ಇದರಲ್ಲಿ ಯಾರ ಒತ್ತಡವೂ ಇಲ್ಲ. ಇದನ್ನು ನಾವು ಬಹಳ ಯೋಚನೆ ಮಾಡಿ ತಂದಿದ್ದೇವೆ. ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲ್‌ರವರು ಮಾತನಾಡುತ್ತಾ ಇದರ ಬಗ್ಗೆ ಪ್ರತಿಭಟನೆ ಬರಬಹುದೆಂದು ಹೇಳಿದರು. ಇಲ್ಲವೆಂದು ಹೇಳುವುದಿಲ್ಲ. ನಮ್ಮ ಅವಧಿಯನ್ನೂ ಕಡಿಮೆ ಮಾಡಿದಾಗ ಅದಕ್ಕೆ ಪ್ರತಿಭಟನೆ ಬರಬಹುದು. ಹಿಂದೆ ಈ ರೀತಿಯ ಕಾನೂನಿನ ವ್ಯವಸ್ಥೆ ಇಲ್ಲದಂಥ ಸಂದರ್ಭದಲ್ಲೂ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತುಗಳ ಕಾನೂನು ಇದ್ದಾಗಲೂ ಕೂಡ ಅವರು ಒಂದು ಅನೌಪಚಾರಿಕವಾದ ಒಪ್ಪಂದದ ಮೂಲಕ 1-2 ವರ್ಷಗಳಿಗೆ ಸೀಮಿತಗೊಳಿಸಿ ಬದಲಾಗಿರತಕ್ಕ ಜಿಲ್ಲೆಗಳ ಉದಾಹರಣೆಗಳೂ ನಮ್ಮ ಮುಂದಿವೆ. ಹಾಸನ ಜಿಲ್ಲೆಯಲ್ಲಿ ಈ ರೀತಿ ಆಯಿತು. ಮೈಸೂರು ಜಿಲ್ಲೆಯಲ್ಲಿ ಈರೀತಿ ಆಯಿತು. ಆದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ಇದು ಪದೇ ಪದೇ ಆಗಿರುವುದನ್ನು ತಾವು ಕಂಡಿದ್ದೀರಿ. ಅವರು ಒಂದು ಅನೌಪಚಾರಿಕವಾದ ಒಪ್ಪಂದದ ಮೂಲಕ ಬೇರೆಯವರಿಗೂ ಅವಕಾಶವನ್ನು ಕಲ್ಪಿಸಿಕೊಡುತ್ತಾರೆ.

ಇನ್ನು ಮೂರನೆಯದಾಗಿ ತಾವು ಎತ್ತಿರತಕ್ಕ ಅಕ್ಷೇಪಣೆ ಎಂದರೆ, ಇಲ್ಲಿ ಇವರು ಅನುಭವವನ್ನು ಗಳಿಸುವುದರೊಳಗಾಗಿ ಅಧಿಕಾರವನ್ನು ಬಿಟ್ಟು ಹೋಗುತ್ತಾರೆಂದು ಹೇಳಿದಿರಿ. ಪ್ರಾಯಶಃ ಮೊದಲನೇ ಸಾರಿ ಆರಿಸಿ ಬಂದವರಿಗೆ ಈ ರೀತಿಯ ತೊಂದರೆಗಳಿರಬಹುದು. ಆದರೆ ಅವರು ಸದಸ್ಯರಾಗಿ ಮುಂದುವರೆದಿರುವುದರಿಂದ ಸದಸ್ಯರಾದವರು ಅಲ್ಲಿ ನಡೆಯುವಂಥ ಎಲ್ಲಾ ನಡವಳಿಕೆಗಳನ್ನೂ ಗಮನಿಸುವುದರ ಮೂಲಕ ಒಂದು ರೀತಿಯ ತರಬೇತಿ ಮತ್ತು ಇಡೀ ಆಡಳಿತದ ವೈಖರಿಯನ್ನು ಅವರು ಅರ್ಥಮಾಡಿಕೊಳ್ಳುವುದರಿಂದ ಈ 20 ತಿಂಗಳ ಅವಧಿಯಿಂದ ಬೇರೆಯವರಿಗೂ ಅವಕಾಶವನ್ನು ಕಲ್ಪಿಸಿಕೊಡುತ್ತಾರೆ. ಆದ್ದರಿಂದ, ದಯವಿಟ್ಟು ಇದಕ್ಕೆ ಈ ಸದನ ತನ್ನ ಒಪ್ಪಿಗೆಯನ್ನು ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ವಿಚಾರ ಎಂದರೆ, ಇದನ್ನು ನೀವು ಗ್ರಾಮ ಪಂಚಾಯಿತಿಗೂ ಏತಕ್ಕೆ ತರಲಿಲ್ಲ ಎಂದು ಪ್ರಸ್ತಾಪ ಮಾಡಿದಿರಿ. ಹಿರಿಯ ಸದಸ್ಯರಾದ ಮಾನ್ಯ ಡಿ.ಆರ್. ಪಾಟೀಲ್‌ರವರು ಇದನ್ನು ಸ್ವಾಗತ ಮಾಡಿದ್ದಾರೆ. ಗ್ರಾಮ ಪಂಚಾಯಿತಿಗೆ ಇದನ್ನು ಏತಕ್ಕೆ ತರಲಿಲ್ಲ ಎಂದರೆ, ಆ ಗ್ರಾಸ್ ರೂಟ್ ಲೆವಲ್‌ನಲ್ಲಿರುವಂಥ ಗ್ರಾಮ

ಪಂಚಾಯಿತಿಯ ಅವಧಿ ಈಗಾಗಲೇ ಮೂರೂವರೆ ವರ್ಷದ ಮೇಲ್ಪಟ್ಟು ಆಗಿದೆ. ಮತ್ತು ಅಲ್ಲೂ ಕೂಡ ಇದನ್ನು ತರಬಾರದೆಂಬುದಕ್ಕೆ ಕಾನೂನಿನ ಅಡಿಯಲ್ಲೇ ನಮಗೆ ತೊಂದರೆ ಇದೆ. ರಾಜ್ಯಾಂಗದ 243 (ಸಿ) ನಿಯಮದ ಅಡಿಯಲ್ಲೂ ಸಹ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಇಲ್ಲಿರತಕ್ಕ ಶಾಸಕರನ್ನು ಗ್ರಾಮ ಪಂಚಾಯಿತಿಯ ಸದಸ್ಯರನ್ನಾಗಿ ಏತಕ್ಕೆ ಮಾಡಬಾರದೆಂದು ಹೇಳಿದರು. ಗ್ರಾಮ ಪಂಚಾಯಿತಿಗೆ ಹೋದರೆ ಇಲ್ಲಿ ನೀವು ಏತಕ್ಕೆ ಬರುತ್ತೀರೆಂದು ಅವರು ನಮ್ಮನ್ನು ಪ್ರಶ್ನೆ ಮಾಡುತ್ತಾರೆಂದು ಮಾನ್ಯ ಸದಸ್ಯರಾದ ಸಭಾಪತಿಯವರು ಹೇಳಿದರು. ಗ್ರಾಮ ಪಂಚಾಯಿತಿಯ ಮಟ್ಟಕ್ಕೆ ಹೋಗಿ ಈ ಶಾಸಕರು ಅಲ್ಲಿರತಕ್ಕ ಅವಕಾಶಗಳಿಂದ ಆ ಜನರನ್ನು ವಂಚಿಸುವುದರ ಜೊತೆಗೆ ಈ ಕ್ರಮ ಸಾಧುವಾದುದಲ್ಲ ಎಂಬ ಕಾರಣದಿಂದ ಈ ರಾಜ್ಯಾಂಗದಲ್ಲೇ ಈ ಮಾತನ್ನು ಹೇಳಿದ್ದಾರೆ.

"…. of the Members of the House of the People and the Members of the Legislative Assembly of the State representing constituencies which comprises wholly or partly a panchayat area at a level other than the village level in such panchayath."

ಆದರ್ ದ್ಯಾನ್‌ದಿ ವಿಲೇಜ್ ಲೆವೆಲ್ ಎಂದರೆ ನಾವು ಮಧ್ಯಂತರ ಹಂತಗಳಾದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ರಾಜ್ಯಾಂಗದ ನಿಯಮವೇ ಇರುವುದರಿಂದ ನಾವು ಗ್ರಾಮ ಪಂಚಾಯಿತಿಯಲ್ಲಿ ಭಾಗವಹಿಸುವುದು ಸಾಧುವಲ್ಲ ಎಂಬ ಉದ್ದೇಶದಿಂದ ಅದನ್ನು ತಂದಿಲ್ಲ. ಮತ್ತು ಗ್ರಾಮ ಪಂಚಾಯಿತಿಯಲ್ಲೂ ಕೂಡ ಈ ವ್ಯತ್ಯಾಸವನ್ನು ಮಾಡಬಾರದೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ.

ಇನ್ನು ಮೂರನೆಯ ಆಕ್ಷೇಪಣೆ, ಈ ಅಧಿಭಾರ ಹಾಕಿರತಕ್ಕ ವಿಚಾರದಲ್ಲಿ ಸರ್‌ಚಾರ್ಜ್ ಎನ್ನುವ ಮಾತು ಸೆಕ್ಷನ್ 205ರ ಕೆಳಗೆ ಇರತಕ್ಕದ್ದರ ಬಗ್ಗೆ ಬಹಳ ತೀರ್ವವಾದ ಆಕ್ಷೇಪಣೆ ಸ್ವಲ್ಪ ತಪ್ಪು ಗ್ರಹಿಕೆ ಮೂಲಕ ಆಗಿದೆ. ನಾವು ತಂದಿರತಕ್ಕ ಈ ತಿದ್ದುಪಡಿ ಯಾವುದೇ ಕಾರಣದಿಂದಲೂ. ಕೂಡ ಬದಲಾವಣೆಯಾದಾಗ ಆ ಭಾರವನ್ನು ತೆರಿಗೆ ರೂಪದಲ್ಲಿ ಹಾಕತಕ್ಕ ಪ್ರಯತ್ನ ಇದರಲ್ಲಿ ಇಲ್ಲ. ಅಥವಾ ಈಗಿರತಕ್ಕ ಕಾನೂನಿನಲ್ಲಿ ಯಾವುದೇ ಬದಲಾವಣೆ ನಾವು ಮಾಡುತ್ತಿಲ್ಲ. ಬದಲಾವಣೆ ಯಾಗಿರತಕ್ಕದ್ದು ಸ್ವಲ್ಪ ಮಟ್ಟಿನ ಅಸ್ಪಷ್ಟತೆಯಿಂದ ಆಗಿರುವುದರಿಂದ ಅನೇಕ ತೀರ್ಮಾನಗಳಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದರೂ ಕೊಡ ಅದನ್ನು ಸರಿಪಡಿಸಲಿಕ್ಕೆ ಅಲ್ಲಿ ಅಧಿಭಾರ ಎಂಬ ಶಬ್ದವನ್ನು ತೆಗೆದುಹಾಕಿ ಹೆಚ್ಚುವರಿ ಸ್ಟ್ಯಾಂಪ್ ಶುಲ್ಕ ಎನ್ನುವ ಮಾತನ್ನು ಮಾತ್ರ ಅಲ್ಲಿ ಹೇಳಿದ್ದೇವೆ. ಶ್ರೀರಾಮಚಂದ್ರ ಅವರಿಗೆ ಇದು ಗೊತ್ತಾಗಬಹುದು. ಇಲ್ಲಿ ಸ್ಟ್ಯಾಂಪ್ ಶುಲ್ಕದ ಮೇಲೆ ಅಧಿಭಾರ ಎಂಬ ಶಬ್ದ ಬಳಸಿದ್ದೇವೆ. ಸ್ಟ್ಯಾಂಪ್ ಶುಲ್ಕದ ಮೇಲೆ ಅಧಿಬಾರ ನಾವು ಕೂಡ ಅನ್‌ಕನ್ನಿಡರೇಷನ್ ಎಂದು ಯೋಚನೆ ಮಾಡಿರತಕ್ಕದ್ದು ಇದೆ. ಅಂದರೆ ಪರಭಾರೆ ಆಗುವಂಥ ಆಸ್ತಿಯ ಮೌಲ್ಯದ ಮೇಲೆ ಇರತಕ್ಕ ಶುಲ್ಕ ಎಂಬ ತಪ್ಪು ಅಭಿಪ್ರಾಯ ಬೀಳಬಾರದೆಂಬ ಕಾರಣಕ್ಕಾಗಿ ಸ್ಟ್ಯಾಂಪಿಗೆ ಆಕರ್ಷಿಸಿರತಕ್ಕ ಮೊತ್ತದ ಮೇಲೆ ಶೇಕಡ 3ರಷ್ಟು ಎಂಬ ಪದ ಇಲ್ಲಿ ಸ್ಪಷ್ಟವಾಗಬೇಕೆಂಬ ಕಾರಣಕ್ಕಾಗಿ ಅಧಿ ಶುಲ್ಕ ಎಂಬ ಪದವನ್ನು ಬಳಸಿದ್ದೇವೆ. It is only a change of nomenclature.

ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಇದನ್ನು ಗಮನಿಸುತ್ತಾರೆಂದು ತಿಳಿದುಕೊಂಡಿದ್ದೇನೆ. ಸೆಕ್ಷನ್ 205ರ ಕೆಳಗೆ "Surcharge on Stamp Duty" - 'The Government may levy a surcharge on the duty imposed by the Karnataka Stamp Act, 1957 on instruments of sale, gift, mortgage, exchange on lease in perpetuity of immovable property situated within the area of taluk panchayat at a rate not exceeding 3% on, as the case may be, the amount of the consideration for the sale value of the property in case of a gift, or amount secured by the mortgage in the case of a gift, or the amount secured by the mortgager the value of the property of the greater value in the case of exchange..... ಈ ಪದವನ್ನು ಬಳಸಿರುವುದರಿಂದ ಕನ್ನಿಡರೇಷನ್ ಮೇಲೆ 3 ಪರ್ಸೆಂಟ್ ಎಂಬ ತಪ್ಪು ಅಭಿಪ್ರಾಯ ಬರುತ್ತದೆಂಬುದಕ್ಕಾಗಿ surcharge on stamp duty ಎಂಬ ನಾಮಿನೇಕ್ಲೇಚರ್ ಬದಲಿ ಮಾಡಿ it is an additional stamp duty ಎಂಬ ಶಬ್ದವನ್ನು ನಾವು ಹೇಳಿದ್ದೇವೆ. ಇದನ್ನು ಬಿಟ್ಟರೆ ಯಾವುದೇ ತರಹ ವ್ಯತ್ಯಾಸ ಮಾಡಿಲ್ಲ. ಇನ್ನು ತಾವು ಏನು ಪ್ರಸ್ತಾಪ ಮಾಡಿದಿರಿ, ಉತ್ತರ ಹಳ್ಳಿಯಲ್ಲಿ ಮತ್ತೊಂದು ಕಡೆ ಇರತಕ್ಕ ಹೆಚ್ಚು ಸ್ಟ್ಯಾಂಪ್ ಡ್ಯೂಟಿಯನ್ನು ಬೇರೆ ಕಡೆಗೆ ಕೊಡುವ ಹಾಗೆ ಮಾಡಿದ್ದೀರಿ, ಎಂದು ಹೇಳಿದ್ದೀರಿ, ಹಾಗೆಯೇ ಅಲ್ಲಿ 20 ಲಕ್ಷ ಜನರು ಇರುತ್ತಾರೆಂದು ಶ್ರೀ ಶ್ರೀನಿವಾಸ್ ಅವರು ಪ್ರಸ್ತಾಪ ಮಾಡಿದರು. ಈ ಕಾನೂನು 1993ರಲ್ಲಿ ಪಾಸ್ ಆಗಿರತಕ್ಕದ್ದು. ಈ ಕಾನೂನಿನಲ್ಲಿ ಕೂಡ ಪದ ಬಳಕೆ ಇರತಕ್ಕದ್ದು ಏನಿದೆ, ಸೆಕ್ಷನ್ 205ರ 4ನೇ ಪರವಿಧಿಯಲ್ಲಿ

"The entire amount collected under sub-section(i) of surcharge on stamp duty in respect of the lands and properties situated in the taluka shall be passed on to the taluk panchayat in the State in proportion to the population of the taluk."

ಈ ರೀತಿಯಾಗಿರುವುದರಿಂದ ಇದಕ್ಕೆ ನಾವು ಏನಾದರೂ ಒಂದು ಹೊಸದಾಗಿ ತಿದ್ದುಪಡಿಯನ್ನು ತಂದು ಇದರಲ್ಲಿ ಗೊಂದಲವನ್ನು ಸೃಷ್ಟಿ ಮಾಡಬೇಕೆಂದು ಈ ಪ್ರಶ್ನೆ ಇಲ್ಲ. ಆದುದರಿಂದ ದಯಮಾಡಿ ಈ ವಿಚಾರದಲ್ಲಿ ಯಾರೂ ಅನ್ಯಥ ಭಾವಿಸಿಕೊಳ್ಳಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತಾ, ತಾವು ಇನ್ನೊಂದು ಮಾತು ಹೇಳಿದಿರಿ, ಈ ಸಣ್ಣ ಪುಟ್ಟ ತಿದ್ದುಪಡಿಗಳನ್ನು ತರುವುದರ ಮೂಲಕ ಬಹಳ ಗೊಂದಲ ಮಾಡುತ್ತಿದ್ದೀರಿ. ಸಮಗ್ರ ತಿದ್ದುಪಡಿತರುವುದಕ್ಕೆ ಡಾ: ನಾಯಕ್ ಸಮಿತಿ ಇದೆ ಎಂದು ಹೇಳಿದಿರಿ. ನಿಜವಾಗಿಯೂ ಈ ವಿಷಯದಲ್ಲಿ ನಾವು ಚುನಾವಣೆಗೆ ಹೋಗತಕ್ಕ ಸಂದರ್ಭದಲ್ಲಿ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಅಧಿಕಾರಕ್ಕೆ ಬಂದಾಗ ಈ ಕಾನೂನನ್ನು ರದ್ದು ಮಾಡುತ್ತೇವೆಂದು ಹೇಳಿದ್ದೆವು. ಈ ಕಾನೂನಿನಲ್ಲಿರತಕ್ಕ ಅನೇಕ ತಪ್ಪುಗಳನ್ನು, ಯಾವುದನ್ನು ಸ್ಥಿರಗೊಳಿಸಬೇಕೆಂದು ಶ್ರೀಕಾಗೋಡು ತಿಮ್ಮಪ್ಪನವರು ಹೇಳಿದರು. ಸ್ಥಿರಗೊಳಿಸಲ್ಪಟ್ಟಿರತಕ್ಕ ಆ ಪ್ರಯೋಗ ಏನಿತ್ತು ಜಿಲ್ಲಾ ಪಂಚಾಯಿತಿ ಮತ್ತು ಮಂಡಲ್ ಪಂಚಾಯಿತಿಗಳನ್ನು ಅನಾವಶ್ಯಕವಾಗಿ ರದ್ದು ಮಾಡಿ ಆಡಳಿತಾಧಿಕಾರಿಯನ್ನು ತಂದು Karnataka panchayat Act of 1993 ಎಂದು ಹೊಸದಾಗಿ ತಂದಿರುವುದರಿಂದ ಆ ಕಾನೂನು ಮೂಲಕ ಸ್ಥಾಪಿಸಲ್ಪಟ್ಟು ಪ್ರಯೋಗಿಸಲ್ಪಟ್ಟಿರತಕ್ಕ ಒಂದು ವ್ಯವಸ್ಥೆ ಅತಂತ್ರವಾಯಿತು.

ಆ ಕಾರಣದಿಂದ ಈ ಒಂದು ಹೊಸ ಕಾನೂನು ಮಾತ್ರ ನಮ್ಮ ನಿರೀಕ್ಷೆಗನುಗುಣವಾಗಿ ಮತ್ತು ಜನರ ನಿರೀಕ್ಷೆಗನುಗುಣವಾಗಿ ಇಲ್ಲದೇ ಇದ್ದುದ್ದರಿಂದ ಅದರಲ್ಲಿ ಬಹುಮಟ್ಟಿನ ತಿದ್ದುಪಡಿಗಳನ್ನು ತರಬೇಕಾದ ಅನಿವಾರ್ಯತೆ ಇತ್ತು. ಆ ಸಂದರ್ಭದಲ್ಲಿ ಬಹಳ ತಿದ್ದುಪಡಿಗಳನ್ನು ನಾವು ಅಧ್ಯಾಧ್ಯಾಪನದ ಮೂಲಕ ತರುವುದಕ್ಕೆ ಮಾನ್ಯ ರಾಜ್ಯಪಾಲರು ಒಪ್ಪಿಗೆ ಕೊಡಲಾರರು, ಇದನ್ನು ಮಾಡಬೇಕಾಗಿರತಕ್ಕ ತರ್ಕ, ಇದರ ಹಿನ್ನೆಲೆ ಏನು, ಉದ್ದೇಶ ಏನು ಎಂಬುದನ್ನು ವಿವರಿಸಬೇಕಾಗುತ್ತದೆ. ಆದುದರಿಂದ ನಾವು ರಾಜಕೀಯ ದೃಷ್ಟಿ ಕೋನದಿಂದ ಇದನ್ನು ವಿಮರ್ಶಿಸದೆ ಅರ್ಥಪೂರ್ಣವಾಗಿರತಕ್ಕ ಜನತಂತ್ರ ವ್ಯವಸ್ಥೆಯನ್ನು ಹಾಗೂ ಅಧಿಕಾರ ವಿಕೇಂದ್ರೀಕರಣ ಮಾಡುವುದಕ್ಕೆ ತಜ್ಞರ ಸಮಿತಿ ವಿರ್ಪಾಡು ಮಾಡಿದ್ದರಿಂದ ಡಾ: ನಾಯಕ್ ಸಮಿತಿ ಈಗಾಗಲೇ ವರದಿ ಕೊಟ್ಟಿದೆ. ಅದರ ಕನ್ನಡ ಭಾಷಾಂತರವನ್ನು ಈಗ ಮಾಡುತ್ತಿದ್ದೇವೆ. ಕನ್ನಡ ಭಾಷಾಂತರ ಆದತಕ್ಷಣ ಅದನ್ನು ಸದನದ ಒಳಗಡೆ ಮತ್ತು ಸದನದ ಹೊರಗಡೆ ನಾವು ಬಿಡುಗಡೆ ಮಾಡುತ್ತೇವೆ. ಅದು ಚರ್ಚೆಯಾಗಿ ಮುಂದಿನ ಸದನ ಸೇರುವಂಥ ಸಂದರ್ಭದಲ್ಲಿ 3-4 ತಿಂಗಳಲ್ಲಿ ವ್ಯಾಪಕವಾಗಿ ಚರ್ಚೆಯಾದಮೇಲೆ, ಆ ಚರ್ಚೆಯ ಫಲಪ್ರದ ಮತ್ತು ಒಕ್ಕೊರಲಿನ ಅಭಿಪ್ರಾಯಕ್ಕೆ ಅನುಗುಣವಾದ ರೀತಿಯಲ್ಲಿ ತಿದ್ದುಪಡಿ ತರುತ್ತಿದ್ದೇವೆ. ಈಗ ತಂದಿರತಕ್ಕದ್ದು ಕೇವಲ 3 ತಿದ್ದುಪಡಿಗಳು. ಇದಕ್ಕೆ ಈ ಸದನದ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, '1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 7ರ ವರೆಗೆ, ಎರಡೂ ಸೇರಿದಂತೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ,. 'ಖಂಡ 2 ರಿಂದ 7ರ ವರೆಗೆ, ಎರಡೂ ಸೇರಿದಂತೆ, ವಿಧೇಯಕದ ಅಂಗವಾಗಿರುತ್ತದೆ'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 7ರ ವರೆಗೆ, ಎರಡೂ ಸೇರಿದಂತೆ. ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, 'ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, "1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, '1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

11 ಪ್ರಕಟಣೆ

ಅವಿಶ್ವಾಸ ನಿರ್ಣಯದ ಚರ್ಚೆ ಬಗ್ಗೆ

ಅಧ್ಯಕ್ಷರು : ಬೆಳಿಗ್ಗೆ ನಾನು ಅವಿಶ್ವಾಸ ನಿರ್ಣಯದ ಸೂಚನೆ ಮೇಲಿನ ಚರ್ಚೆ 19ನೇ ತಾರೀಖು ಎನ್ನುವ ಮಾತು ಹೇಳಿದೆ. ಮಾನ್ಯ ವಿರೋಧ ಪಕ್ಷದ ಮುಖಂಡರುಗಳು ಒಂದು ಅಭಿಪ್ರಾಯ ವ್ಯಕ್ತಪಡಿಸಿದರು. 19 ಒಂದು ದಿನ ಚರ್ಚೆಗೆ ಸಾಕಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ ಮತ್ತು ನಂತರದ ದಿನಗಳಲ್ಲಿ ಪ್ರಧಾನ ಮಂತ್ರಿಗಳ ಕಾರ್ಯಕ್ರಮ ಮೊದಲ ಬಾರಿಗೆ ಅಧಿಕೃತವಾಗಿ ರಾಜ್ಯದಲ್ಲಿ ಅವರು ಬರುತ್ತಿರುವುದರಿಂದ ಆಡಳಿತ ಪಕ್ಷದವರಿಗೆ ಇರುವ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು 26 ಮತ್ತು 27 ಎರಡು ದಿನಗಳ ಪೂರ್ಣಾವಧಿಗೆ ಅವಿಶ್ವಾಸ ನಿರ್ಣಯದ ಬಗ್ಗೆ ತೆಗೆದುಕೊಳ್ಳುವುದಕ್ಕೆ ದಿನಾಂಕ ನಿಗದಿಪಡಿಸಿದೆ. ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

12. ವಿಶೇಷ ಪ್ರಸ್ತಾಪ

ಸಭಾಧ್ಯಕ್ಷರ ವಿದೇಶ ಪ್ರವಾಸಕ್ಕೆ ಶುಭ ಕೋರುವ ಬಗ್ಗೆ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿ ಕೋರಿ, ಒಂದು ವಿಶೇಷ ಪ್ರಸ್ತಾವನೆ ಮಾಡುವುದಕ್ಕೆ ಬಯಸುತ್ತಿದ್ದೇನೆ. ನಮ್ಮ ಮಾನ್ಯ ಸಭಾಧ್ಯಕ್ಷರು ಇದೇ 16ನೇ ತಾರೀಖಿನಿಂದ ಸೆಪ್ಟೆಂಬರ್ 30ರವರೆಗೆ ವಿದೇಶ ಪ್ರವಾಸದಲ್ಲಿರುತ್ತಾರೆ. ಅವರು 16ರಿಂದ 26ರವರೆಗೆ 42ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಕಾನ್ಫರೆನ್ಸಿಗೆ ಕೌಲಾಲಂಪುರದಲ್ಲಿ ಭಾಗವಹಿಸುವುದಕ್ಕೆ ಹೋಗುತ್ತಿದ್ದಾರೆ. ಆದಾದ ಮೇಲೆ ಪೋಸ್ಟ್ ಕಾನ್ಫರೆನ್ಸ್ ಟೂರ್ ಎಂದು ಬಾಕಿ ಇರತಕ್ಕ ದಿನಗಳಲ್ಲಿ ಅವರು ಆಸ್ಟ್ರೇಲಿಯ, ಹಾಂಕಾಂಗ್, ಜಪಾನ್, ನ್ಯೂಜಿಲ್ಯಾಂಡ್, ಪಿಲಿಫೈನ್ಸ್, ಸೌತ್‌ಕೋರಿಯ, ಸಿಂಗಾಪುರ್ ರಾಷ್ಟ್ರಗಳಲ್ಲಿರತಕ್ಕ ನಮ್ಮ